ವಿಷಯ : ಪಡುಬೆಳ್ಳಿ ಗ್ರಾಮಕ್ಕೆ ವಿದ್ಯುತ್ ಸಬ್‌ಸ್ಟೇಷನ್ ಮಂಜೂರಾತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 187(41)
ಶ್ರೀ ವಸಂತ ವಿ. ಸಾಲಿಯಾನ್ (ಕಾಪು)

ಮಾನ್ಯ ಉಪಮುಖ್ಯಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಕಾಪು ಕ್ಷೇತ್ರದ ಪಡುಬೆಳ್ಳಿ ಗ್ರಾಮದಲ್ಲಿ ವಿದ್ಯುತ್ ಸಬ್‌ಸ್ಟೇಷನ್ ಮಂಜೂರಾಗಿದೆಯೇ? ಹಾಗಿದ್ದಲ್ಲಿ ಎಂದು.

ಆ) ಇದಕ್ಕೆ ಎಷ್ಟು ಹಣ ಮಂಜೂರಾಗಿದೆ.

ಇ) ಕಾಮಗಾರಿಯು ಯಾವ ಹಂತದಲ್ಲಿದೆ.

ಈ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ. ಬಿ.ಹೆಚ್. ಪಟೇಲ್
ಉಪ ಮುಖ್ಯಮಂತ್ರಿಗಳು.

ಅ) ಹೌದು 1993ರಲ್ಲಿ.

ಆ) ಅಂದಾಜು ವೆಚ್ಚ 95.18 ಲಕ್ಷ ರೂಗಳಾಗಿದ್ದು ಪ್ರಾರಂಭಿಕ ಕೆಲಸಗಳಿಗಾಗಿ ಪ್ರಸಕ್ತ ಸಾಲಿನ (1994-95) ಆಯವ್ಯಯದಲ್ಲಿ 5 ಲಕ್ಷ ರೂ.ಗಳನ್ನು ಒದಗಿಸಿದೆ.

ಇ) ಮಣಿಪಾಲದಿಂದ ಪರುಬೆಳ್ಳಿ(ಶಿರ್ವ)ಗೆ 33ಕೆವಿ ಲೈನಿನ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು ಮುಕ್ತಾಯದ ಹಂತದಲ್ಲಿದೆ. ಪಡುಬೆಳ್ಳಿಯ 33:11 ಕೆವಿ ವಿದ್ಯುತ್ ಉಪಕೇಂದ್ರದ ನಿರ್ಮಾಣವು ಸಹ ಪ್ರಗತಿಯಲ್ಲಿದ್ದು, ಸಿವಿಲ್ ಕಾಮಗಾರಿಗಳು ಉತ್ತಮ ರೀತಿಯಲ್ಲಿ ಸಾಗುತ್ತಿದೆ.

ಈ) ಮೇ 95ರ ಅಂತ್ಯದೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.

ಗಮನ ಸೆಳೆಯುವ ಸೂಚನೆ

ವಿಷಯ ರಾಜ್ಯದಲ್ಲಿ 'ಬೆಂಗಳೂರು ನಗರವನ್ನು' ಹೊರತು ಪಡಿಸಿ ಹಳ್ಳಿ ಹಾಗೂ ಪಟ್ಟಣಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವದಿಂದ ಉಂಟಾಗಿರುವ ತೊಂದರೆಯ ಬಗ್ಗೆ.

ಶ್ರೀ. ಮಲ್ಲಿಕಾರ್ಜುನ ಖರ್ಗೆ(ಗುರುಮಠಕಲ್):- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ

27 MAR 1995

''ಬೆಂಗಳೂರು ನಗರವನ್ನು'' ಹೊರತು ಪಡಿಸಿ ಹಳ್ಳಿ ಹಾಗೂ ಪಟ್ಟಣಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವದಿಂದ ತೊಂದರೆಯ ಬಗ್ಗೆ. ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ. ಎಂ.ಪಿ. ಪ್ರಕಾಶ್
(ನಗರಾಭಿವೃದ್ಧಿ ಮತ್ತು ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್)

ಮಾನ್ಯ ಅಧ್ಯಕ್ಷರೇ,

1. ಜನಸಂಖ್ಯೆ : 1991ರ ಜನಗಣತಿಯ ಆಧಾರದ ಮೇರೆಗೆ ರಾಜ್ಯ ಗ್ರಾಮಿಣ ಜನಸಂಖ್ಯೆ 311 ಲಕ್ಷಗಳು. ಇದರಲ್ಲಿ ಸುಮಾರು 56 ಲಕ್ಷ ಪರಿಶಿಷ್ಟ ಜಾತಿಗೂ, ಸುಮಾರು 16 ಲಕ್ಷ ಪರಿಶಿಷ್ಟ ಪಂಗಡಕ್ಕೂ ಸೇರಿದವರಾಗಿರುತ್ತಾರೆ. ಗ್ರಾಮಿಣ ಪ್ರದೇಶದ ಕುಟುಂಬಗಳ ಒಟ್ಟು ಸಂಖ್ಯೆ ಸುಮಾರು 57 ಲಕ್ಷ.

ರಾಜ್ಯದ ಗ್ರಾಮಿಣ ಪ್ರದೇಶದ 27,000ಕ್ಕೂ ಮಿಕ್ಕಿದ ಕಂದಾಯ ಗ್ರಾಮಗಳು ಸೇರಿದಂತೆ ಒಟ್ಟು 56,689 ಜನವಸತಿ ಪ್ರದೇಶದಲ್ಲಿ ವಾಸವಾಗಿರುತ್ತದೆ.

2. ಕುಡಿಯುವ ನೀರಿನ ಅನುಕೂಲತೆ: 250 ಜನಸಂಖ್ಯೆಗೆ ಕನಿಷ್ಠ ಒಂದು ಕುಡಿಯುವ ನೀರಿನ ಮೂಲ ಇರಬೇಕೆಂಬುದೇ ಸರ್ಕಾರ ಧ್ಯೇಯ. ಅದರಂತೆ ಕನಿಷ್ಠ 1.6 ಕಿ.ಮಿ. ದೂರಕ್ಕೆ ಮಿರದಂತೆ ಈ ಸೌಲಭ್ಯ ದೊರಕುವುದು.

ಕಳೆದ ಒಂದು ದಶಕಕ್ಕಿಂತಲೂ ಹೆಚ್ಚಿನ ಅವಧಿಯಲ್ಲಿ ಸರ್ಕಾರದ ಮೂಲ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ದಿನಾಂಕ 1.1.1995ರ ವೇಳೆಗೆ ಒಟ್ಟಾರೆ 1.50 ಲಕ್ಷಕ್ಕೂ ಮೀರಿದ ಕುಡಿಯುವ ನೀರಿನ ಮೂಲಗಳನ್ನು 1.1.1995ರ ವೇಳೆಗೆ ಒಟ್ಟಾರೆ 1.50 ಲಕ್ಷಕ್ಕೂ ಲಕ್ಷಕ್ಕೂ ಮೀರಿದ ಕುಡಿಯುವ ನೀರಿನ ಮೂಲಗಳನ್ನು ಸ್ಥಾಪಿಸಲಾಗಿದೆ. ಇವುಗಳಲ್ಲಿ 1.33 ಲಕ್ಷ ಕೊಳವೆಬಾವಿ(ಕೈಪಂಪು),8,100 ಕಿರು ನೀರು ಸರಬರಾಜು ಯೋಜನೆ ಮತ್ತು ಸುಮಾರು 9,000 ಕೊಳಾಯಿ ನೀರಿನ ಯೋಜನೆಗಳು ಸಹ ಸೆರಿದೆ. ಈ ದಿಕ್ಕಿನತ್ತ ರಾಜ್ಯ ಸರ್ಕಾರ ಸುಮಾರು 450 ಕೋಟಿಗೂ ಹೆಚ್ಚಿನ ಮೊಬಗಲನ್ನು ತೊಡಗಿಸಿದೆ.

1994-95ನೇ ಸಾಲಿನಲ್ಲಿ 4,252 ಕೈಪಂಪು ಕೊಳವೆಬಾವಿಗಳನ್ನು ಕೊರೆಯಲು ಗುರಿ ನಿಗದಿಪಡಿಸಿದೆ. 1995ರ ಜನವರಿ ಅಂತ್ಯದ ವೇಳೆಗೆ 3,795 ಕೊಳವೆಬಾವಿಗಳನ್ನು ಈಗಾಗಲೇ ಕೊರೆಯಲಾಗಿದೆ. ಅಂತೆಯೇ ಈ ಅವಧಿಯಲ್ಲಿ 1050 ಕಿರು ನೀರು ಸರಬರಾಜು ಯೋಜನೆಗಳನ್ನು ಕಾರ್ಯಗತಗೊಳಿಸುವ ಗುರಿ ಹಾಕಿಕೊಂಡಿದ್ದು, 996 ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗಿದೆ. ಇದರಂತೆಯೇ 741 ಕೊಳಾಯಿ ನೀರು ಸರಬರಾಜು ಯೋಜನೆಗಳ ಗುರಿ ಇದ್ದು 646 ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗಿದೆ.

ಇದರಿಂದಾಗಿ ಸುಮಾರು ಪ್ರತಿಶತ 50ರಷ್ಟು ಗ್ರಾಮೀಣ ಜನತೆಗೆ ದಿನವೊಂದಕ್ಕೆ ತಲಾ 40 ಲೀಟರ್‌ನಷ್ಟು ಉತ್ತಮ ನೀರಿನ ಸೌಲಭ್ಯವನ್ನು ಒದಗಿಸಿದಂತಾಗಿದೆ. ಇನ್ನು ಉಳಿದಂತೆ ವಿವಿಧ ಪ್ರಮಾಣದಲ್ಲಿ ಅಂದರೆ ದಿನವೊಂದಕ್ಕೆ 20 ಲೀಟರ್ ಮತ್ತು ದಿನವೊಂದಕ್ಕೆ 30 ಲೀಟರಿನಂತೆ ಉಳಿದ ಗ್ರಾಮೀಣ ಜನತೆ ನೀರಿನ ಸೌಲಭ್ಯವನ್ನು ಪಡೆಯುತ್ತಿದೆ.

3. ಹೆಚ್ಚಿನ ಸೌಲಭ್ಯ: ಜನಸಂಖ್ಯೆ ಏರುತ್ತಿರುವುದರಿಂದ ಹಾಗೂ ಗ್ರಾಮೀಣ ಜನರ ವಸತಿಯ ಭಾಗಗಳು ಹೆಚ್ಚಾಗುತ್ತಿರುವುದರಿಂದ ಕುಡಿಯುವ ನೀರಿನ ಸೌಕರ್ಯಕ್ಕೆ ಬೇಡಿಕೆಗಳು ಹೆಚ್ಚುತ್ತಿವೆ. ಅಲ್ಲದೆ ಇನ್ನೂ ಪ್ರತಿಶತ 50ರಷ್ಟು ಗ್ರಾಮೀಣ ಜನತೆಗೆ ದಿನವೊಂದಕ್ಕೆ ತಲಾ 40 ಲೀಟರ್ ನೀರಿನ ಸೌಲಭ್ಯ ಒದಗಿಸಬೇಕಿದೆ. ಆದರೆ ಅಂತರ್ಜಲವನ್ನು ಹೆಚ್ಚುಹೆಚ್ಚು ಈ ರೀತಿ ಬಳಕೆ ಮಾಡುತ್ತಿರುವುದರಿಂದ ಹಾಗೂ ಕೃಷಿ ಬಳಕೆಗೆ ಅಂತರ್ಜಲವನ್ನು ಪ್ರಮಾಣದಲ್ಲಿ ಉಪಯೋಗಿಸುತ್ತಿರುವುದರಿಂದ ಕುಡಿಯುವ ನೀರಿನ ಮೂಲಗಳನ್ನು ಸುಲಭದ ಮಾತಲ್ಲ. ಇದಲ್ಲದೆ ಕುಡಿಯುವ ನೀರಿನ ಕೊರತೆ ಕಂಡುಬರುವುದು ಸಹ ಸಾಮಾನ್ಯವಾಗಿದೆ.

4. ಹಣಕಾಸಿನ ಸೌಲಭ್ಯ : ಜನತೆಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವುದು ಮೂಲ ಉದ್ದೇಶವಾಗಿರುವುದರಿಂದ ಈ ದಿಸೆಯಲ್ಲಿ ಹಣದ ಕೊರತೆಯನ್ನು ಮುಂದೆ ಮಾಡುವುದು ಸಾಧ್ಯವಲ್ಲ. ಇದನ್ನು ಅರಿತುಕೊಂಡೇ ರಾಜ್ಯ ಸರ್ಕಾರವು ಈ ಸಾಲಿನ ಸಾಮಾನ್ಯ ಅನುದಾನಕ್ಕಿಂತಲೂ ಪ್ರತಿಶತ 45ರಷ್ಟು ಹೆಚ್ಚಾಗಿ ಹಣಕಾಸಿನ ಸೌಲಭ್ಯವನ್ನು ಒದಗಿಸಿದೆ. ಆಯವ್ಯಯದಲ್ಲಿ ಕೇಂದ್ರ ಸರ್ಕಾರದ ಅನುದಾನ ಸೇರಿಸಿಕೊಂಡ ರೂ. 70.65 ಕೋಟಿ ಮೊಬಗಲನ್ನು ಒದಗಿಸಿಕೊಂಡಿದ್ದರೂ ಸಹ, ಇಲ್ಲಿಯವರೆಗೆ ಸರ್ಕಾರವು ರೂ. 104.35 ಕೋಟಿ ಮೊಬಗಲನ್ನು ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಈಗಾಗಲೇ ಬಿಡುಗಡೆ ಮಾಡಲಾಗಿದೆ.

5. ಪರಿಸ್ಥಿತಿಯ ಗಂಭೀರತೆ ಮತ್ತು ಮುಂಜಾಗ್ರತೆ ಕ್ರಮಗಳು:

ರಾಜ್ಯದ ಎಲ್ಲಡೆ4100 ಜನವಸತಿ ಗ್ರಾಮೀಣ ಪ್ರದೇಶಗಳು ಬೇಸಿಗೆಯಲ್ಲಿ ಕುಡಿಯುವ ನೀರಿನ ಕೊರತೆಯನ್ನು ಅನುಭವಿಸಬಹುದೆಂದು ಗುರುತಿಸಲಾಗಿದೆ. ದಿನಾಂಕ 22.3.95ರಂದು ಜಿಲ್ಲಾಧಿಕಾರಿಗಳ ತುರ್ತು ಸಭೆ ಕರೆದು ಪರಿಣಾಮಕಾರಿ ಕ್ರಮಗಳ ಬಗ್ಗೆ ಚರ್ಚಿಸಲಾಗಿದೆ. ತಮ್ಮ ವಿವೇಚನೆಗೆ ಅನುಗುಣವಾಗಿ ಸ್ಥಳದಲ್ಲಿಯೇ ಸೂಕ್ತ ಕ್ರಮ ತೆಗೆದುಕೊಳ್ಳಲು ಅಧಿಕಾರ ನೀಡಲಾಗಿದೆ. ವಾರದಲ್ಲಿ ಒಮ್ಮೆ ಜಿಲ್ಲಾ ಪಂಚಾಯತನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕಾರ್ಯಪಾಲಕ ಇಂಜಿನಿಯರ್ ಅವರೊಡನೆ ವಿಶೇಷವಾಗಿ ಸಭೆ ನಡೆಸಿ ಕ್ರಮ ಜರುಗಿಸಲೂ ಸಹ ಸೂಚಿಸಿದೆ. ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಜಿಲ್ಲಾಧಿಕಾರಿಗಳನ್ನು ವೈಯಕ್ತಿಕವಾಗಿ ಹೊಣೆಗಾರರನ್ನಾಗಿ ಮಾಡಲಾಗಿದೆ.

ಅವಶ್ಯಕತೆ ಬಿದ್ದಲ್ಲಿ ಕುಡಿಯುವ ನೀರನ್ನು ಸಾಗಾಣಿಕೆ ಮಾಡಬೇಕಾದಲ್ಲಿ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸೂಚಿಸಲಾಗಿದೆ.

ರಾಜ್ಯದ ಜನಾರೋಗ್ಯ ಶಿಲ್ಪಕಾರ್ಯವಲಯವನ್ನು ಮುಂದಿನ ಎರಡು ತಿಂಗಳಲ್ಲಿ 1000 ಕೊಳವೆಬಾವಿಗಳನ್ನು ಕೊರೆಯಲು ಸಿದ್ಧವಾಗಿದೆ. ಇದಲ್ಲದೆ ಖಾಸಗಿ ವಲಯದ ರಿಂಗ್‌ಗಳನ್ನು ಅವಶ್ಯಕತೆಗೆ ಅನುಗುಣವಾಗಿ ಬಾಡಿಗೆಗೆ ತೆಗೆದುಕೊಂಡು ಕೊಳವೆಬಾವಿಗಳನ್ನು ಕೊರೆಯಲು ಜಿಲ್ಲಾಧಿಕಾರಿಗೆ ಹೆಚ್ಚಿನ ಅಧಿಕಾರವನ್ನು ನೀಡಲಾಗಿದೆ.

6. ದೀರ್ಘಕಾಲಿಕ ಯೋಜನೆಗಳು :

ಅ) ರಾಜ್ಯದಲ್ಲಿರುವ ಅಂತರ್ಜಲದ ಸಮತೋಲನವನ್ನು ಕಾಪಾಡಿಕೊಂಡು ಬರಲು ಹಾಗೂ ಹೆಚ್ಚಿಸಲು ನೂತನ ಯೋಜನೆಗಳನ್ನು ರೂಪಿಸುವುದು. ಕುಡಿಯುವ ನೀರಿನ ಮೂಲಗಳು ಅಕ್ಷಯ ಪಾತ್ರೆಯಲ್ಲವೆಂದು ಜನತೆಗೆ ಅರಿವು ಮೂಡಿಸುವುದು.

ಆ) ಜನಾರೋಗ್ಯ ಶಿಲ್ಪಕಾರ್ಯ ಇಲಾಖೆಯಲ್ಲಿರುವ 74 ಕೊಳವೆಬಾವಿ ಯಂತ್ರಗಳ ಕಾರ್ಯ ಸಮರ್ಥನೆಯನ್ನು ತಿಂಗಳೊಂದಕ್ಕೆ ಈಗಿರುವ ತಲಾ 15 ಕೊಳವೆಬಾವಿಯಿಂದ 20 ಕೊಳವೆಬಾವಿ ಕೊರೆಯುವತ್ತ ಹೆಚ್ಚಿಸುವುದು.

ಇ) ಇಲಾಖೆಯಲ್ಲಿರುವ ಹೈಡ್ರೋಫ್ರಾಕ್ಚರಿಂಗ್ ಯಂತ್ರಗಳ ಸಂಖ್ಯೆಯನ್ನು ಒಂದರಿಂದ ನಾಲ್ಕಕ್ಕೆ ಹೆಚ್ಚಿಸುವುದು. ಇದರಿಂದಾಗಿ ನೂತನ ಕೊಳವೆಬಾವಿಗಳ ಅವಶ್ಯಕತೆಯನ್ನು ಕಡಿಮೆ ಮಾಡಿದಂತೆಯೂ ಆಗುವುದಲ್ಲದೆ ಈ ದಿಸೆಯಲ್ಲಿ ಆಗುವ ವೆಚ್ಚವನ್ನು ಸಹ ಮಿತಿಗೊಳಿಸಬಹುದು.

ಈ) 1995-96ನೇ ಆರ್ಥಿಕ ವರ್ಷದಲ್ಲಿ ಕುಡಿಯುವ ನೀರಿನ ಈಗಿರುವ ಮೂಲಗಳನ್ನು ಪುನಶ್ಚೇತನಗೊಳಿಸುತ್ತ ವ್ಯಾಪಕವಾದ ಪರಿಣಾಮಕಾರಿ ಕ್ರಮಗಳನ್ನು ರೂಪಿಸಿ ಮುಂದಿನ ಎರಡು ವರ್ಷಗಳನ್ನು ''ಜಲ ಮೂಲ ಪುನಶ್ಚೇತನ ಅವಧಿ'' ಎಂದು ಘೋಷಿಸುವುದು ಹಾಗೂ ಈ ನಿಟ್ಟಿನಲ್ಲಿ ಕ್ರಮ ಜರುಗಿಸುವುದು.

ಮಾನ್ಯ ಅಧ್ಯಕ್ಷರೆ, ರಾಜ್ಯದ ವಿವಿಧ ಪಟ್ಟಣಗಳಲ್ಲಿ ಕುಡಿಯುವ ನೀರಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಒಂದಿರುವುದರಿಂದ ಹೆಚ್ಚುವರಿ ಹೇಳಿಕೆಯನ್ನು ಕೊಡಬಯಸುತ್ತೇನೆ.

1. ಬಿಜಾಪುರ :

ಸಾಮಾನ್ಯ ಪರಿಸ್ಥಿತಿಯಲ್ಲಿ ಬಿಜಾಪುರ ನಗರಕ್ಕೆ 1.5 ಎಂ.ಜಿ.ಡಿ.ಗಳಷ್ಟು ನೀರನ್ನು ಕೃಷ್ಣಾ ನದಿಯಿಂದಲೂ ಮತ್ತು 1.50 ಎಂ.ಜಿ.ಡಿ.ಗಳಷ್ಟು ನೀರನ್ನು ಭೂತದಾನ ಕೆರೆಯಿಂದಲೂ ಸರಬರಾಜು ಮಾಡಲಾಗುತ್ತಿದೆ. ಹೋದ ಮಳೆಗಾಲದಲ್ಲಿ ಮಳೆಯ ಅಭಾವದಿಂದ ಭೂತನಾಳ ಕೆರೆಯಲ್ಲಿ ಸಾಕಷ್ಟು ನೀರಿನ ಶೇಖರಣೆ ಇಲ್ಲದ ಕಾರಣ ನಗರದ ಜನರಿಗೆ ಪ್ರತಿ ದಿನ ನೀರು ಸರಬರಾಜು ಮಾಡಲಾಗುತ್ತಿಲ್ಲ. ಆದುದರಿಂದ ನೀರು ಸರಬರಾಜು 4 ದಿನಕ್ಕೊಮ್ಮೆ ಮಾಡಲಾಗುತ್ತಿದೆ.

2. ಗುಲ್ಬರ್ಗಾ: ಸದ್ಯಕ್ಕೆ ಗುಲ್ಬರ್ಗಾ ನಗರದ ನೀರು ಸರಬರಾಜು ಭೀಮಾ ನದಿಯಿಂದ ದಿನಂಪ್ರತಿ 45-50 ಲಕ್ಷ ಗ್ಯಾಲನ್‌ಗಳಷ್ಟು ಪೂರೈಸಲಾಗುತ್ತಿದೆ. ಸಾಕಷ್ಟು ನೀರನ್ನು ಭೀಮಾ ನದಿಗೆಸರದಿಗೆ 'ಬಿ'ಹಳ್ಳಿಯಲ್ಲಿ ಕಟ್ಟಿರುವ ಅಣೆಕಟ್ಟಿನಲ್ಲಿ ಶೇಖರಿಸಲಾಗಿದೆ. ಈಗಿನ ನೀರಿನ ಶೇಖರಣೆಗೆ 180 ದಶಲಕ್ಷ ಘನ ಅಡಿಗಳಷ್ಟು ಇದ್ದು, ಇದು ಗುಲ್ಬಾರ್ಗ ನಗರಕ್ಕೆ ದಿನಂ ಪ್ರತಿ 45-50 ಲಕ್ಷ ಗ್ಯಾಲನ್‌ನಂತೆ ಜುಲೈ15ರವರೆವಿಗೂ ಸರಬರಾಜು ಮಾಡಲು ಶೇಖರಿಸಲಾಗಿದೆ. ಆದ್ದರಿಂದ ಈ ನಗರಕ್ಕೆ ಪ್ರತಿ ದಿನವೂ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಆದರೆ ಕೆಲವು ಪ್ರದೇಶದಲ್ಲಿ ವಿತರಣಾ ವ್ಯವಸ್ಥೆ ಇಲ್ಲದಿರುವುದರಿಂದ ನೀರಿನ ಅಭಾವವು ಉಂಟಾಗಿದೆ. ಈ ಅಭಾವವನ್ನು ನೀಗಿಸಲು ಕೆಲವು ಕಡೆ ಕೊಳವೆಬಾವಿಗಳನ್ನು ಕೊರೆಯಲು ಕ್ರಮ ಕೈಗೊಳ್ಳಲಾಗುವುದು.

3. ಹುಬ್ಬಳ್ಳಿ ಮತ್ತು ಧಾರವಾಡ

ಹುಬ್ಬಳ್ಳಿ ಮತ್ತು ಧಾರವಾಡ ಅವಳಿ ನಗರಗಳಿಗೆ ನೀರು ಸರಬರಾಜನ್ನು ಮೂರುಮೂಲಗಳಿಂದ ಮಾಡಲಾಗುತ್ತಿದೆ. ಅವುಗಳು ಯಾವುವೆಂದರೆ, 1. ನೀರಸಾಗರ 2.ಮಲಪ್ರಭಾ ಜಲಾಶಯ ಮತ್ತು 3. ಉಣಕಲ ಕೆರೆ.

ಮೇಲಿನ ಮೂರು ಮೂಲಗಳಿಂದ ಒಟ್ಟು 24 ದಶಲಕ್ಷ ಗ್ಯಾಲನ್ ನೀರನ್ನು ಪ್ರತಿ ದಿನವೂ ಸರಬರಾಜು ಮಾಡಲು ಸಾಧ್ಯವಿದೆ.

ಆದರೆ ವಿದ್ಯುಚ್ಛಕ್ತಿಯ ಒಲ್ಟೇಜ್ ಕಡಿಮೆ ಇದ್ದು ನೀರನ್ನು ಪಂಪ್ ಮಾಡುವ ಸಮಯದಲ್ಲಿ ಬಹಳ ಕಡಿತವಾಗಿರುವುದರಿಂದ ಈಗ ಮೂರುಮೂಲಗಳಿಂದ ಈ ಕೆಳಕಂಡಂತೆ ದಿನಂಪ್ರತಿ 19.50 ದಶಲಕ್ಷ ಗ್ಯಾಲನ್ ನೀರನ್ನು ಮಾತ್ರ ಪಂಪ್ ಮಾಡಲು ಸಾಧ್ಯವಾಗಿದೆ.

ಮಲಪ್ರಭಾ ಜಲಾಶಯ	11.00 ದಶಲಕ್ಷ ಗ್ಯಾಲನ್
ನೀರ ಸಾಗರ	7.50 ದಶಲಕ್ಷ ಗ್ಯಾಲನ್
ಉಣಕಲ ಕೆರೆ	1.00 ದಶಲಕ್ಷ ಗ್ಯಾಲನ್
	19.50 ದಶಲಕ್ಷ ಗ್ಯಾಲನ್

ಇದರಿಂದ ಕೆಲವು ಪ್ರದೇಶಗಳಿಗೆ ನೀರು ಸರಬರಾಜು ಕೊರತೆ ಉಂಟಾಗಿದೆ.

4. ಗದಗ-ಬೆಟಗೇರಿ

ಗದಗ-ಬೆಟಗೇರಿ ನಗರಕ್ಕೆ 60.ಕಿ.ಮಿ ದೂರದಲ್ಲಿರುವ ತುಂಗಭದ್ರಾ ನದಿಯಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಈ ವ್ಯವಸ್ಥೆಯಿಂದ ದಿನಕ್ಕೆ 3.50 ದಶಲಕ್ಷ ಗ್ಯಾಲನ್ ನೀರನ್ನು ಸರಬರಾಜು ಮಾಡಲು ಸಾಧ್ಯವಿದೆ. ಆದರೆ ಇತ್ತೀಚೆಗೆ ವಿದ್ಯುತ್ ಒಲ್ಟೇಜನಲ್ಲಿ ಬಹಳ

ಏರುಪೇರು ಇರುವುದರಿಂದ ಪೂರ್ಣ ಪ್ರಮಾಣದ ನೀರನ್ನು ಪಂಪು ಮಾಡಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದಾಗಿ ನೀರಿನ ಕೊರತೆ ಉಂಟಾಗಿದೆ.

5. ಮುಂಡರಗಿ ಪಟ್ಟಣ

ಮುಂಡರಗಿ ಪಟ್ಟಣಕ್ಕೆ ಗದಗ್-ಬೆಟಗೇರಿ ನೀರು ಸರಬರಾಜು ಯೋಜನೆಯಿಂದ ಮುಂಡರಗಿಯಲ್ಲಿ ನಿರ್ಮಿಸಿರುವ ಜಲ ಶುದ್ದೀಕರಣಾಗಾರದಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ.

6. ಬೀದರ್

ಬೀದರ್ ಪಟ್ಟಣಕ್ಕೆ ಮಂಜ್ರಾನದಿಯಿಂದ ನೀರನ್ನು ಸರಬರಾಜು ಮಾಡಲಾಗುತ್ತಿತ್ತು. 1994ರ ಮಳೆಗಾಲದಲ್ಲಿ ಸಾಕಷ್ಟು ಮಳೆ ಬಾರದೇ ಇರುವುದರಿಂದ, ಮಂಜ್ರಾನದಿಯು ಸದ್ಯಕ್ಕೆ ಹೆಚ್ಚು ಕಮ್ಮಿ ಬತ್ತಿ ಹೋಗಿದೆ. ಕುಡಿಯುವ ನೀರಿನ ಬವಣೆಯನ್ನು ಎದುರಿಸಲು ಬೀದರ್ ನಗರದ ಜಂಗಲಕೂಯೆ ಹಳ್ಳಿಯಲ್ಲಿ ಹಾಲಿ ಇರುವ ಆರು ವೆಚ್ಚ ಒರತೆಯು ಕೊಳವೆ ಬಾವಿಗಳನ್ನು ಉಪಯೋಗಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ. ಹಾಗೂ ಈ ಕೆಲಸವು ಪ್ರಗತಿಯಲ್ಲಿದೆ. ಎರಡು ಆಳದ ಕೊಳವೆ ಬಾವಿಗಳನ್ನು ಸದಾ ಕೊರೆಯಲು ಕ್ರಮ ತೆಗೆದುಕೊಂಡಿದ್ದು ಇವು ಈಗ ತಾನೇ ಪೂರ್ಣಗೊಂಡಿದೆ. ಈ ಕೊಳವೆ ಬಾವಿಗಳನ್ನು ಉಪಯೋಗಿಸಿಕೊಳ್ಳಲು ಸೂಕ್ತ ಪಂಪ್‌ಗಳು ಹಾಗೂ ನೀರನ್ನು ಕೊಳವೆಗಳ ಮುಖಾಂತರ ವಿತರಿಸಲು ಕ್ರಮಕ್ಕೆಗೊಳ್ಳಲಾಗಿದೆ.

ಸರ್ಕಾರವು ಈಗಾಗಲೇ ದಿನಾಂಕ 2.3.95ರಲ್ಲಿ ರೂ. 50 ಲಕ್ಷಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ನೀರಿನ ತೀವ್ರ ಕೊರತೆ ಇರುವ ಪಟ್ಟಣಗಳಲ್ಲಿ ತುರ್ತಾಗಿ ಕೊಳವೆ ಬಾವಿಗಳನ್ನು ತೋಡಿಸಲು ಬಿಡುಗಡೆ ಮಾಡಲಾಗಿದೆ. ಕರ್ನಾಟಕನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಈಗಾಗಲೇ ಈ ಕಾರ್ಯವನ್ನು ಪ್ರಾರಂಭಿಸಿರುತ್ತದೆ. ಬೆಂಗಳೂರು ನಗರ ಅಧಿಸೂಚಿತ ಪ್ರದೇಶಗಳಲ್ಲಿ ನೀರಿನ ಬವಣೆಯನ್ನು ತಡೆಯಲು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ರೂ. 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಇದಲ್ಲದೇ ಸರ್ಕಾರವು ದಿ. 3.2.95ರಂದು ಪ್ರಕೃತಿವಿಕೋಪ ಪರಿಹಾರ ನಿಧಿಯಿಂದ ರೂ. 80. ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿದೆ. ಪದೇಪದೇ ಸಂಭವಿಸುತ್ತಿರುವ ವಿದ್ಯುಚ್ಛಕ್ತಿ ಓಲ್ಟೇಜನಲ್ಲಿ ಏರುಪೇರು ನೀರಿನ ಸಮಸ್ಯೆಗೆ ಮುಖ್ಯ ಕಾರಣವಾಗಿದೆ. ಇದಲ್ಲದೆ ನೀರಾವರಿ ಪಂಪು ಸೆಟ್ಟುಗಳಿಗೆ ಹೆಚ್ಚಾಗಿ ವಿದ್ಯುಚ್ಛಕ್ತಿ ಬಳಸಿಕೊಳ್ಳುವುದರಿಂದ ಈ ಸಮಸ್ಯೆ ಮತ್ತಷ್ಟು ಉಲ್ಬಣವಾಗಿದೆ. ನಮ್ಮ ರಾಜ್ಯದ ವಿದ್ಯುತ್ ಸರಬರಾಜು ಸ್ಥಿತಿಯು ಇನ್ನೂ ಎರಡು ವಾರಗಳಲ್ಲಿ ಉತ್ತಮಗೊಳ್ಳುವ ನಿರೀಕ್ಷೆ ಇದೆ. ಈ ದಿಶೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಶೀಘ್ರದಲ್ಲಿ 400ಕೆ.ವಿ. ಸ್ಟೇಷನನ್ನು ಚಾಲು ಮಾಡಲಿದ್ದಾರೆ. ಇದರ ಜೊತೆಗೆ ಸೇಡಂ. ಬಸವನ ಬಾಗೇವಾಡಿ ಮತ್ತು ದಾವಣಗೆರೆಯಲ್ಲಿ 220 ಕೆ.ವಿ ಸ್ಟೇಷನನ್ನು ಚಾಲು ಮಾಡಲಿದ್ದಾರೆ. ಇದೂ ಅಲ್ಲದೆ

ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಕಡಿಮೆ ಓಲ್ಟೇಜ್ ಇರುವ ಪ್ರದೇಶಗಳಲ್ಲಿ ಕೆಪಾಸಿಟರ್ಸ್ ಸ್ಥಾಪನೆ ಮಾಡಲಿದ್ದಾರೆ.

ರಾಜ್ಯದಲ್ಲಿ ಪ್ರಸ್ಥುತ ಉದ್ಭವಿಸಿರುವ ನೀರಿನ ಸಮಸ್ಯೆಯನ್ನು ಪರಿಶೀಲಿಸಲು 22.3.95ರಂದು ಜಿಲ್ಲಾಧಿಕಾರಿಗಳ ಸಭೆ ನಡೆಸಲಾಯಿತು. ಸದರಿ ಸಭೆಯಲ್ಲಿ ಕರ್ನಾಟಕ ವಿದ್ಯುತ್ ಮಂಡಳಿಯ ಅಧಿಕಾರಿಗಳು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಇವರು ಉಪಸ್ಥಿತರಿದ್ದರು. ನಗರ ಪ್ರದೇಶಗಳಲ್ಲಿನ ನೀರಿನ ಸಮಸ್ಯೆ ನೀಗಿಸಲು ಒಂದು ಸಮಗ್ರ ಯೋಜನೆಯನ್ನು ತಯಾರು ಮಾಡಲಾಗುತ್ತಿದೆ. ಈ ವಿಷಯವನ್ನು ಅತಿ ಗಂಭೀರವಾಗಿ ಪರಿಗಣಿಸಿ ಈ ಸಭೆಯಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

1. ಪಂಪಿಂಗ್ ಸ್ಟೇಷನ್‌ಗಳಲ್ಲಿ ಬೂಸ್ಟರ್ ಮತ್ತು ಡೀಸಲ್ ಮತ್ತು ಜನರೇಟರ್‌ಗಳನ್ನು ಉಪಯೋಗಿಸಿ ಓಲ್ಟೇಜ್‌ನ್ನು ಉತ್ತಮಪಡಿಸುವುದು.

2. ಕೆಟ್ಟ ಬೋರ್‌ವೆಲ್‌ಗಳನ್ನು ದುರಸ್ತಿ ಮಾಡುವುದು.3. ಹೊಸ ಕೊಳವೆ ಭಾವಿಗಳನ್ನು ಕೊರೆಯುವುದು ಮತ್ತು ನೀರಿನ ಉತ್ಪಾದನಾ ಆಧಾರದ ಮೇಲೆ ಅವುಗಳಿಗೆ ಕೈ ಪಂಪು ಅಥವಾ ಪವರ್ ಪಂಪುಗಳನ್ನು ಜೋಡಿಸುವುದು.

4. ಎಲ್ಲ ಈ ಮೇಲಿನ ಕ್ರಮಗಳಿಂದ ನೀರಿನ ಸಮಸ್ಯೆಯನ್ನು ನಿವಾರಿಸಲು ಸಾಧ್ಯವಾಗುವುದಿಲ್ಲವೋ ಅಲ್ಲೇ ಟ್ಯಾಂಕರುಗಳ ಮೂಲಕ ನೀರನ್ನು ಸರಬರಾಜು ಮಾಡುವುದು.

ಸರ್ಕಾರ ಈ ಮೇಲಿನ ಕ್ರಮಗಳನ್ನು ಜಾರಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅವಶ್ಯವಿರುವ ಹಣವನ್ನು ಬಿಡುಗಡೆ ಮಾಡಲಾಗುವುದು. ಜಿಲ್ಲಾಧಿಕಾರಿಗಳು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮತ್ತು ಮುನಿಸಿಪಾಲಿಟಿ ಅಧಿಕಾರಿಗಳ ಜೊತೆ ಸಮಾಲೋಚನೆ ಈ ಸಮಗ್ರ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು. ಈ ಎಲ್ಲಾ ಕ್ರಮಗಳಿಂದ ನೀರಿನ ಅಭಾವವಿರುವ ಪ್ರದೇಶಗಳಲ್ಲಿ ನೀರಿನ ಸರಬರಾಜು ಉತ್ತಮಗೊಳ್ಳುವ ನಿರೀಕ್ಷೆಇದೆ.

ಶ್ರೀಎಂ. ಮಲ್ಲಿಕಾರ್ಜುನ್ ಖರ್ಗೆ: ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಎರಡು ಭಾಗ ಇದೆ. ಒಂದು ಹಳ್ಳಿಯಲ್ಲಿರತಕ್ಕಂತಹ ಜನರಿಗೆ ಕುಡಿಯುವ ನೀರಿನ ಸಮಸ್ಯೆ, ಮತ್ತು ಪಟ್ಟಣದಲ್ಲಿರತಕ್ಕಂಥದ್ದು. ಈ ಪಂಚಾಯತ್ ರಾಜ್ ವ್ಯಾಪ್ತಿಯಲ್ಲಿ ಬರತಕ್ಕಂತಹ ಹಳ್ಳಿಗಳು ಏನು ಇವೆ. ಅದಕ್ಕೆ 70 ಕೋಟಿ ರೂಪಾಯಿ ಪ್ರಾವಿಷನ್ ಇತ್ತು. ಸುಮಾರು 104 ಕಮೀಟಿ ರೂಪಾಯಿ ಇಲ್ಲಿಯವರಿಗೆ ಖರ್ಚು ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೀರಿ. ಅದರಲ್ಲಿ ಈ ನ್ಯಾಚುರಲ್ ಕಲಾಮಿಟೀಸ್‌ಗೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ. ರೆಗ್ಯುಲರ್ ಬಜೆಟ್‌ನಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ. ಆಮೇಲೆ ಸ್ಕೇರ್‌ನಿಟಿ ಅಮೌಂಟ್ ಆಮೇಲೆ

ಸೆಂಟ್ರಲ್ ಫಂಡ್, ಕೇಂದ್ರ ಸರ್ಕಾರದವರು ಕೂಡ ಕುಡಿಯುವ ನೀರಿಗಾಗಿ ವಿಶೇಷವಾದಂತಹ ಹಣಕಾಸಿನ ವ್ಯವಸ್ಥೆಯನ್ನು ಮಾಡಿದ್ದಾರೆ. ಆ ಹಣ ಯಾವಯಾವ ಜಿಲ್ಲೆಗಳಿಗೆ ಯಾವಯಾವ ರೀತಿಯಾಗಿ ಬಿಡುಗಡೆ ಮಾಡಿದ್ದೀರಿ. ನಾಲ್ಕನುಯದಾಗಿ ಅನೇಕ ಹಳ್ಳಿಗಳಲ್ಲಿ ಈ ಬೋರ್‌ವೆಲ್‌ಗಳ ರಿಪೇರಿಗೆ ಮೆಯಂಟಿನ್ಸ್‌ಗೋಸ್ಕರವಾಗಿ ಹಣ ಬಿಡುಗಡೆ ಆಗಿಲ್ಲ. ಹೊಸ ಬೋರ್‌ವೆಲ್‌ಗಳನ್ನು ತೆಗೆಯುವುದಕ್ಕೆ ತಾವು ಹಣ ಒದಗಿಸಿರಬಹುದು, ಆದರೆ ಮೆಯಿಂಟ್‌ಸಿನ್ಸ್ ಗೋಸ್ಕರ ಅನೇಕ ತಾಲ್ಲೂಕುಗಳಲ್ಲಿ ಹಣವನ್ನು ನೇರವಾಗಿ ಕೊಟ್ಟಿಲ್ಲ. ಇವತ್ತು ಅಲ್ಲಿ ರಿಪೇರಿಗೋಸ್ಕರ ಹಣ ಕೇಳಿದಾಗ ಅವರು ಜಿಲ್ಲಾಧಿಕಾರಿಗಳಾಗಲಿ ಅಥವಾ ಸಂಬಂಧ ಪಟ್ಟಅಸಿಸ್ಟೆಂಟ್ ಕಮೀಷನವರುಗಳು ಆಗಲಿ ಹೇಳತಕ್ಕದ್ದು ಏನು ಅಂದರೆ ಬೋರ್‌ವೆಲ್‌ಗಳನ್ನು ಕೊಡುತ್ತೇವೆಯೋ ಹೊರತಾಗಿ ರಿಪೇರಿಗೆ ಹಣ ಕೊಡುವುದಕ್ಕೆ ನಮಗೆ ಹಣ ಇಲ್ಲವೆಂದು ವಾದವನ್ನು ಮಾಡುತ್ತಿದ್ದಾರೆ. ಅದರ ಜೊತೆಗೆ ಇಲ್ಲಿ ಇನ್‌ಸಫಿಶೆಯಂಟ್ ಸ್ಟಾಫ್ ಇದೆ. ಮೈಟಂನಿಗೋಸ್ಕರ ಅನೇಕ ತಾಲ್ಲೂಕುಗಳಲ್ಲಿ ಮೆಕಾನಿಕ್‌ಗಳು ಇಲ್ಲ. ಅದಕ್ಕಾಗಿ ಸಾಕಷ್ಟು ಹಳ್ಳಿಗಳಲ್ಲಿ ಬೋರ್‌ವೆಲ್‌ಗಳ ರಿಪೇರಿ ಆಗದೆ ಕುಡಿಯುವ ನೀರಿನ ತೊಂದರೆ ಇದೆ. ಎಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ, ವಿಶೇಷವಾಗಿ ಅದರ ಬಗ್ಗೆ ನಮ್ಮ ಸದಸ್ಯರು ಹೇಳಿದ್ದಾರೆ. ಹೋದ ಸಲ ಇದರ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದರು. ತಾವು ಈ ಟ್ಯಾಂಕರುಗಳ ಮೂಲಕ ನೀರನ್ನು ಕೊಡುತ್ತಿದ್ದೇವೆಂದು ಹೇಳಿದ್ದೀರಿ. ಇದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ. ಅದು ಕೂಡ ಹೇಳಿಲ್ಲ. ಯಾದ್ಗೀರ್ ಬಗ್ಗೆ ಕೂಡಾ ಹೇಳಿಲ್ಲ. ಮತ್ತು ಬೀದರ್ ಬಗ್ಗೆ ಷ್ಟೊನ್ನೆ ತಾನೆ ನಮ್ಮ ಶಾಸಕರು ಗಮನ ಸೆಳೆಯುವ ಸೂಚನೆಯಲ್ಲಿ ಉತ್ತರ ತರಿಸಿ ಸವಿಸ್ತಾರವಾಗಿ ಹೇಳುತ್ತೇವೆಂದು ಮಾನ್ಯ ನಗರಾಭಿವೃದ್ಧಿ ಸಚಿವರು ಹೇಳಿದರು. ಹಾಗೆಯೇ ತುರ್ತಾಗಿ ಟ್ರಾನ್ಸ್‌ಪೊಟೇಶನ್‌ಗೆ ಹಣ ಕೊಡುತ್ತೇವೆಂದು ಹೇಳಿದ್ದೀರಿ, ಅದು ಎಷ್ಟು ಪರ್ಸೆಂಟ್ ಹಣ ಕೊಟ್ಟಿದ್ದೀರಿ, ಎಂದು ಹೇಳಬೇಕು. ಅದರಲ್ಲಿ ಪಟ್ಟಣಗಳಿಗೆ ಎಷ್ಟು ಹಣ ಕೊಟ್ಟಿದ್ದೀರಿ, ಹಳ್ಳಿಗಳಿಗೆ ಎಷ್ಟು ಕೊಟ್ಟಿದ್ದೀರಿ? ಆಮೇಲೆ ಮೈಂಟೆನ್ಸಿಗೋಸ್ಕರ ಅಲ್ಲಿರತಕಂತಹ್ಕ ಬೋರ್‌ವೆಲ್‌ಗಳಿಗೆ ಎಷ್ಟು ಹಣ ಕೊಡುತ್ತೀರಿ, ಪಟ್ಟಣಗಳಲ್ಲಿರತಕ್ಕಂತಹದ್ದಕ್ಕೆ ಎಷ್ಟು ಹಣ ಕೊಡುತ್ತೀರಿ? ನ್ಯಾಚುರಲ್ ಕಲಾಮಿಟೀಸ್ ಎಷ್ಟು ಬಿಡುಗಡೆ ಮಾಡಿದ್ದೀರಿ, ಈ ಬಗ್ಗೆ ಸ್ವಚ್ಛವಾಗಿ ಹೇಳಿಲ್ಲ. ಹಾಗೆ ಹೇಳಿದರೆ ಮಾತ್ರ ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಶಾಸಕರು ನೇರವಾಗಿ ಕೇಳುವುದಕ್ಕೆ ಆಗುತ್ತದೆ. ಇಂತಿಂಥ ತಾರೀಖಿಗೆ ಇಷ್ಟು ಹಣಬಂದಿದೆ, ಕೆಲಸ ತೆಗೆದುಕೊಳ್ಳುವುದಕ್ಕೆ ಆಗುತ್ತದೆ ಎಂದು ನಾವು ಹೇಳಬಹುದು.

ಅಧ್ಯಕ್ಷರು : ಈ ರೀತಿ ಮಾಡೋಣ, ಇನ್ನು 3-4 ಜನರು ಕ್ಲಾರಿಫಿಕೇಶನ್ ಕೇಳುವವರು ಇದ್ದಾರೆ . ನೀವು ಎಲ್ಲವನ್ನೂ ಒಟ್ಟಿಗೆ ನೋಟ್ ಮಾಡಿಕೊಂಡು ಒಮ್ಮೆಗೆ ಉತ್ತರ ಕೊಟ್ಟರೆ ಬಡ್ಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ಮತ್ತು ಅದಕ್ಕೆ ಹೆಚ್ಚು ಸಮಯ ವಿನಿಯೋಗ ಮಾಡುವುದಕ್ಕೆ ಸಾಧ್ಯವಾಗುತ್ತದೆ.ಶ್ರೀ. ಟಿ.ಬಿ. ಜಯಚಂದ್ರ: ಸನ್ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ, ಎಲ್ಲರೂ ಹೀಗೆ ಕೈ ಎತ್ತಿದರೆ ಹೇಗೆ? ನನ್ನ ಸಮಸ್ಯೆಯನ್ನು ಕೂಡ ನೀವು ನೋಡಬೇಕಲ್ಲ, ಬಜೆಟ್ ಮೇಲೆ ಇನ್ನೂ ಜನರಲ್ ಡಿಸ್‌ಕಷನ್ ಪ್ರಾರಂಭ ಆಗಿಲ್ಲ.

ಶ್ರೀ. ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಬಗ್ಗೆ ಯಾವ ನಗರಕ್ಕೆ ಹೋದರೂ, ಯಾವ ಗ್ರಾಮಕ್ಕೂ ಹೋದರೂ ಕೂಡಾ ಇವತ್ತು ತುಂಬಾ ನೀರಿನ ಸಮಸ್ಯೆಯನ್ನು ಕಾಣುತ್ತಿದ್ದೇವೆ. ನನಗನ್ನಿಸುತ್ತದೆ, ಸರ್ಕಾರ ಈ ದಿಕ್ಕಿನಲ್ಲಿ ಯೋಚನೆ ಮಾಡಿಲ್ಲ. ಸ್ಪಷ್ಟವಾಗಿ ಹೇಳಬೇಕೆಂದರೆ ಈಗ ಅನೇಕ ಮಂತ್ರಿಗಳು ಇದ್ದಾರೆ, ಅನೇಕ ಇಲಾಖೆಗಳು ಇವೆ.

ಅಧ್ಯಕ್ಷರು : ನಾನು ತಮಗೆ ಹೇಳುವುದು ಏನೆಂದರೆ ಮಂತ್ರಿಗಳು ಈಗ ಹೇಳಿಕೆ ಮಾಡಿದ್ದಾರೆ. ಸ್ಪಷ್ಟೀಕರಣ ರೂಪದಲ್ಲಿ 2-3 ಪ್ರಶ್ನೆಗಳನ್ನು ನೀವು ಕೇಳಿ. ಈಗ ಮಾನ್ಯ ಖರ್ಗೆಯವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನೀವು 2-3 ಪ್ರಶ್ನೆ ಕೇಳಿದರೆ ಒಟ್ಟಿಗೆ ಉತ್ತರ ಹೇಳುತ್ತಾರೆ. ನಂತರ ನಾವು ಬಜೆಟ್ ಮೇಲೆ ಚರ್ಚೆ ಮಾಡಬಹುದು.

ಶ್ರೀ. ಕೆ.ಎಸ್.ಈಶ್ವರಪ್ಪ : ನಾನು 2-3ಸಲಹೆಗಳ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಬೇರೆ ಏನು ಹೇಳುವುದಕ್ಕೂ ನಾನು ಇಷ್ಟಪಡುವುದಿಲ್ಲ. ಮೊದಲನೆಯದಾಗಿ 74ನೇ ಅಮೆಂಡ್‌ಮೆಂಟ್ ಪ್ರಕಾರ ಏನು ಆಗಿದೆ ಎಂದರೆ ಎಲ್ಲಾ ಇಲಾಖೆಗಳು ಕೂಡಾ ಪ್ರತ್ಯೇಕ ಪ್ರತ್ಯೇಕವಾಗಿ ಇವೆ. ನಗರಸಭೆ ಹೋದರೆ ಅರ್ಬನ್ ವಾಟರ್ ಸಪ್ಲೈಗೆ ಬೇರೆ ಇಲಾಖೆ ಇರುತ್ತದೆ. ಸ್ಲಂ ಕ್ಲಿಯರೆನ್ಸ್‌ಗೆ ಸಂಬಂಧಪಟ್ಟಂಥ ಸಮಸ್ಯೆ ಬೇರೆ ಇರುತ್ತದೆ. ಬೇರೆ ಬೇರೆ ಇಲಾಖೆಗಳು ಒಟ್ಟಿಗೆ ಸೇರುವಂಥ ಅವಶ್ಯಕತೇ ಇದೆ. ಈ ಅಮೆಂಡ್‌ಮೆಂಟ್ ಪ್ರಕಾರ ಕನಿಷ್ಠ ಮುನ್ಸಿಪಾಲಿಟಿ ಅಥವಾ ನಗರಸಭೆ ಸಂಬಂಧಪಟ್ಟಂತೆ ಎಲ್ಲಾ ಇಲಾಖೆಗಳ ಅಸಿಸ್ಟೆಂಟ್ ಇಂಜಿನಿಯರ್‌ಗಳು ಒಂದು ಕಡೆ ಹಾಗೆ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಇದು ಒಂದೊಂಕ್ಕೂ ಸಮಸ್ಯೆ ಆಗುತ್ತದೆ. ಎರಡನೆಯದಾಗಿ ಈ ಎಲ್ಲಾ ಇಲಾಖೆಗಳು ಪ್ರತ್ಯೇಕವಾಗಿ ಕೆಲಸ ಮಾಡುತ್ತಿರುವುದರಿಂದ ಯಾರ ಕೈಗೂ ಯಾರೂ ಸಿಗುವುದಿಲ್ಲ. ಮೂರನೆಯದು ಈ ಬೋರ್‌ವೆಲ್‌ಗಳನ್ನು ತೆಗೆಯುವುದಕ್ಕೆ ಸಹ ನಗರಸಭೆ ಮತ್ತು ಪುರಸಭೆಗಳು 50 ಪರ್ಸೆಂಟ್ ಹಣ ಹಾಕಿಕೊಳ್ಳಬೇಕೆಂದು ಹೇಳಿದ್ದಾರೆ. ಇವತ್ತು ನಗರಸಭೆಗಳು 50 ಪರ್ಸೆಂಟ್ ಹಣ ಹಾಕುವ ಸ್ಥಿತಿಯಲ್ಲಿಲ್ಲ. ಅದಕೋಸ್ಕರ ತಕ್ಷಣ ಸರ್ಕಾರದವರು ಏನು ಮಾಡಬೇಕೆಂದರೆ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ, ಅದನ್ನು ಕಡಿಮೆ ಮಾಡುವ ದೃಷ್ಟಿಯಿಂದ ನಿರ್ದಿಷ್ಟವಾದ ಇಂತಹ ಹಳ್ಳಿಗಳಲ್ಲಿ ಏನು ಸಮಸ್ಯೆ ಇದೆ, ಇಂತಹ ನಗರಗಳಲ್ಲಿ ಏನು ಸಮಸ್ಯೆ ಇದೆ ಎಷ್ಟು ಹಣ ಬೇಕಾಗುತ್ತದೆ, ಇವು ಎಷ್ಟು ದಿವಸಗಳಲ್ಲಿ ಮುಗಿಸುತ್ತೀರಿ, ಈ ರೀತಿ ಕಾರ್ಯಕ್ರಮ ತೆಗೆದುಕೊಂಡು ಮಾಡಿದರೆ ಅನುಕೂಲವಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಪಂಚಾಯತ್ ಇಲಾಖೆ ಮಾಡುವುದು ಅಥವಾ ನಗರಪ್ರದೇಶಗಳಲ್ಲಿ ನಗರಾಭಿವೃದ್ಧಿ ಇಲಾಖೆ ಮಾಡುವುದು ಅಂದರೆ ಬಹಳ ಸಮಸ್ಯೆ ಆಗುತ್ತದೆ. ಆದ್ದರಿಂದ ನಾನು ಹೇಳುವುದು ಏನೆಂದರೆ ಈ ಕುಡಿಯುವ ನೀರನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಪ್ರತ್ಯೇಕವಾದ ಮಂತ್ರಿಯನ್ನು ಮಾಡಿ, ಅವರಿಗೆ ಈ ಇಲಾಖೆವಹಿಸಿ ಅವರಿಗೆ ಜವಾಬ್ದಾರಿಯನ್ನು ಕೊಟ್ಟರೆ ಆಗ ಇಡೀ ರಾಜ್ಯದ ನೀರಿನ ಸಮಸ್ಯೆ ಪರಿಹಾರ ಮಾಡುವ ದಿಕ್ಕಿನಲ್ಲಿ ಆ ಇಲಾಖೆ ಗಮನಿಸಬಹುದು. ಇವತ್ತು ಸಕ್ಕರೆಗೆ ಒಬ್ಬ ಮಂತ್ರಿ ಇದ್ದಾರೆ, ಮಾಡಬೇಕು, ಬೇಡ ಎಂದು ಹೇಳುವುದಕ್ಕಿಂತ ಈ ಸಮಸ್ಯೆ ಬಗ್ಗೆ ಯೋಚನೆ ಮಾಡಿ ಈ ನೀರಿನ ಸಮಸ್ಯೆ ಪರಿಹಾರ ಮಾಡುವುದಕ್ಕೆ ಒಬ್ಬ ಮಂತ್ರಿಯನ್ನು ಮಾಡಿ ಅವರಿಗೆ

ಒಂದೇ ಇಲಾಖೆಯನ್ನು ಮತ್ತು ಸಂಪೂರ್ಣ ಹಣವನ್ನು ಅದಕ್ಕೆ ಮೀಸಲಿಟ್ಟು ಅವರ ಮುಖಾಂತರವೇ ಎಲ್ಲಾ ಗ್ರಾಮಗಳಿಗೂ ಮತ್ತು ನಗರಗಳಿಗೂ ಹಣ ಕೊಡಬೇಕು. ಆದು ಏನಾಗುತ್ತದೆ ಎಂದರೆ ಯೋಚನೆಗಳು ತಯಾರಾಗುತ್ತವೆ, ಆದರೆ ಕಾರ್ಯಗತವಾಗುವುದಿಲ್ಲ. ಉದಾಹರಣೆಗೆ ಈಗಾಗಲೇ 90ನೇ ಇಸವಿಯಲ್ಲಿ ಸುಮಾರು 18 ನಗರಗಳಲ್ಲಿ ಈ ರೀತಿ ಯೋಜನೆಗಳು ತಯಾರು ಆದವು. ಅವುಗಳು 93ನೇ ಇಸವಿಯೊಳಗೆ ಮುಗಿಯಬೇಕಾದಿತ್ತು. ಆದರೆ ಆ ಯೋಜನೆಗಳು ಇನ್ನೂ ಕೂಡ ಮುಗಿದಿಲ್ಲ. ಏಕೆಂದರೆ ಸಂಪೂರ್ಣವಾಗಿ ಅದಕ್ಕೇ ಗಮನಕೊಡುವ ವ್ಯವಸ್ಥೆ ಕಡಿಮೆ ಇದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಶಿವಮೊಗ್ಗದಲ್ಲಿ 93ನೇ ಇಸವಿಯಲ್ಲಿ ಒಂದು ಯೋಜನೆಯಲ್ಲಿ 5 ಕೋಟಿ ರೂಪಾಯಿಗಳಲ್ಲಿ ಮುಗಿಸಲೇಬೇಕಿತ್ತು. ಈಗ ಇದಕ್ಕೆ 96ನೇ ಇಸವಿಯವರೆಗೂ ಎಕ್ಸ್‌ಟೆನ್ಸ್‌ನ್ ಕೇಳಿದ್ದಾರೆ. ಈಗ ಆ ವೆಚ್ಚ 5 ಕೋಟಿ 12 ಕೋಟಿವರೆಗೆ ಹೋಗುತ್ತಿದೆ. ಆದರೂ ಕೂಡ ನನಗೆ ವಿಶ್ವಾಸ ಇಲ್ಲ. ಅದಕ್ಕೋಸ್ಕರ ಪ್ರತ್ಯೇಕ ಇಲಾಖೆಯನ್ನು ಕುಡಿಯುವ ನೀರಿಗೆ ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ಮಾನ್ಯ ಉಪಮುಖ್ಯಮಂತ್ರಿಯವರು ಹೇಳಿದರು, ನೀರಿನ ಸಮಸ್ಯೆ ಪರಿಹಾರ ಮಾಡುವುದಕ್ಕೋಸ್ಕರ ನಾವು ಸಮರೋಪಾದಿಯಲ್ಲಿ ಕೆಲಸ ಮಾಡುತ್ತೇವೆಂದು ಆದರೆ ಈಗ ನೀರು ಪಡೆಯುವುದೇ ಒಂದು ಸಮರವಾಗಿದೆ. ಅದಕ್ಕೋಸ್ಕರ ನಾನು ಸರ್ಕಾರಕ್ಕೆ ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಕೊಳವೆ ಬಾವಿಗಳ ರಿಪೇರಿಗೆ ನಿರ್ದಿಷ್ಟವಾದ ಹಣವನ್ನು ತಕ್ಷಣ ಕೊಡಬೇಕಾಗಿದೆ. ಓಪನ್‌ವೆಲ್ ರಿಪೇರಿ ಇದನ್ನು ಕ್ಲೀನ್ ಮಾಡುವುದಕ್ಕೆ ಕೂಡ ಆಗಿಲ್ಲ. ಮತ್ತು ಇಡೀ ರಾಜ್ಯದಲ್ಲಿ ಅರ್ಧಂಬರ್ಧ ಏನು ಕೆಲಸ ನಿಂತಿದೆ ಅವುಗಳನ್ನು ಪೂರ್ಣಮಾಡುವ ದೃಷ್ಟಿಯಿಂದ ಕೂಡ ಸರ್ಕಾರ ತುರ್ತು ಕ್ರಮ ತೆಗೆದುಕೊಂಡರೆ ಅನುಕೂಲವಾಗುತ್ತದೆ. ಇವತ್ತು ಯಾವ ಗ್ರಾಮಕ್ಕೂ ಹೋದರೂ ಕೂಡ ನಾವು ಅನೇಕ ಹಳ್ಳಿಗಳಲ್ಲಿ ಕೇಳಿದ್ದೇವೆ ನಿಮ್ಮ ಊರಿಗೆ ಹೆಣ್ಣೇ ಕೊಡುವುದಿಲ್ಲವೆಂದು ಹೇಳುತ್ತಾರೆ.

ಅಧ್ಯಕ್ಷರು, ದಯವಿಟ್ಟು ಕೇಳಿ, ತಾವೆಲ್ಲ ಹಿರಿಯರು, ಗಮನ ಸೆಳೆಯುವ ಸೂಚನೆಯಲ್ಲಿ ಕ್ಲಾರಿಫಿಕೇಶನ್ ಕೇಳದೆ ಭಾಷಣ ಮಾಡಿದೆರೆ ಹೇಗೆ ನನಗಂತೂ ತ್ತೊಂದರೆ ಇಲ್ಲ. ಇಡೀ ರಾಜ್ಯಕ್ಕೆ ಬೇಕಾಗುವ ಹಣವನ್ನು ನಾವು ಮಂಜೂರಾತಿ ಮಾಡಿಕೊಡುತ್ತಿದ್ದೇವೆ, ಇದರ ಬಗ್ಗೆ ಚರ್ಚೆಯಾಗುವುದು ಬೇಡವೆ? ಇನ್ನು ಎಷ್ಟು ರೀತಿಯಲ್ಲಿ ನನ್ನ ನೋವನ್ನು ನಿಮ್ಮ ಜೊತೆಯಲ್ಲಿ ತೋಡಿಕೊಳ್ಳಬೇಕು? ಸ್ಪಷ್ಟೀಕರಣ ಕೇಳಿ ಎಂದರೆ ಸಮರಕ್ಕೆ ಹೋಗುತ್ತೀರಿ, ಸಮರ ಏಕೆ? ಮಾಡಬೇಕೋ ಕುಡಿಯುವ ನೀರಿಗೆ ಏನು ಆದನ್ನು ಕೇಳಿ. ನೀವು

ಹಿರಿಯರು ಇದ್ದೀರಿ, ನಾನು ನಿಮಗೆ ಹೇಳುವಂತಹ ಸ್ಥಿತಿಗೆ ನೀವು ನನ್ನನ್ನು ತರಬಾರದು.

ಶ್ರೀ ಕೆ.ಎಸ್. ಈಶ್ವರಪ್ಪ 74 ಅಮೆಂಡ್‌ಮೆಂಟ್ ಏನು ಇದೆ. ಆಧ್ಯರ ಪ್ರಕಾರ ಈಗ ಎಲ್ಲಾ ಡಿಪಾರ್ಟ್‌ಮೆಂಡ್‌ಗಳು ಬೇರೆ ಬೇರೆ ಇದೆ. ಆದು ಅರ್ಬನ್ ಬೋರ್ಡ್ ಇರಬಹುದು, ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಇರಬಹುದು, ನಗರಸಭೆ, ಮುನಿಸಿಪಾಲಿಟಿ ಕೆಳಗಡೆ ಏನು ಬೋರ್ಡುಗಳು ಬರುತ್ತವೆ, ಉದಾಹರಣೆಗೆ 15 ದಿನಗಳಿಗೊಮ್ಮೆ ಶಾಸಕರನ್ನು ಕರೆದು ಇಡೀ ಕ್ಷೇತ್ರದಲ್ಲಿನ ಕುಡಿಯುವ ನೀರಿನ ಬಗ್ಗೆ ಸ್ಪೆಸಿಫಿಕ್ ಆಗಿ ಅನುಕೂಲ ಮಾಡಿಕೊಡುವಂಥದ್ದಕ್ಕೆ ಗಮನ ಕೊಡಲು

ಪ್ರಯತ್ನ ಮಾಡಬೇಕು ಎನ್ನುವುದು ಮೊದಲನೆಯದು. ಎರಡನೆಯದು, ಶೇಕಡ 50 ರಷ್ಟು ಹಣವನ್ನು ನಗರಸಭೆ, ಪುರಸಭೆ, ಕಾರ್ಪೊರೇಷನ್‌ನವರು ಕೊಡಬೇಕೆಂದು ಹೇಳುತ್ತಾರೆ. ಇವತ್ತು ಯಾವುದೇ ನಗರಸಭೆಯಲ್ಲೂ ಹಣ ಇಲ್ಲ. ಅದಕ್ಕಾಗಿ ಪೂರ್ಣ ಹಣವನ್ನು ಸರ್ಕಾರದವರೇ ಕೊಡಬೇಕು ಅಂತ ಹೇಳುತ್ತೇನೆ. ಮೂರನೆಯದು ದಿನಾಂಕ 2.12.94ರಂದು ತಾವು ಇಡೀ ರಾಜ್ಯಕ್ಕೆ ಒಂದು ಸುತ್ತೋಲೆ ಕಳುಹಿಸಿದ್ದೀರಿ. ಅದರ ಪ್ರಕಾರ ದಿನಾಂಕ 1.4.95ರಿಂದ ನೀರಿಗೆ ಏಕ ರೀತಿಯ ದರ ವಿಧಿಸಬೇಕೆಂದು ಮಾಡುತ್ತಿದ್ದೀರಿ. ಇಡೀ ರಾಜ್ಯದಲ್ಲಿ 1.4.95ರಿಂದ ಮಹಾನಗರ ಪಾಲಿಕೆಗೆ 1,000 ಲೀಟರ್ 3.00 ರೂಪಾಯಿನಂತೆ, ನಗರಸಭೆ, 1,000 ಲೀಟರ್‌ಗೆ 2.50 ರೂಪಾಯಿನಂತೆ, ಪುರಸಭೆಗೆ 1,000 ಲೀಟರ್‌ಗೆ 2.00 ರೂಪಾಯಿನಂತೆ ಮಾಡಿದ್ದೀರಿ. ಇವತ್ತು ಇಡೀ ರಾಜ್ಯದಲ್ಲಿ ನೀರು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ನೀರಿಗೆ ತೆರಿಗೆ ಕೊಡಿ ಎಂದರೆ ಖಂಡಿತ ನಾವು ಒಪ್ಪಿಕೊಳ್ಳುವುದಿಲ್ಲ. ಮೊದಲು, ನೀರಿನ ವ್ಯವಸ್ಥೆ ಮಾಡಿ. ಆಮೇಲೆ ನೀವು ಏಕ ರೂಪದ ದರ ತನ್ನಿ. ಈಗ ನಾವು ನಮ್ಮ ಕ್ಷೇತ್ರಗಳಿಗೆ ಹೋದರೆ ಜನಗಳಿಗೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನೀರಿನ ವ್ಯವಸ್ಥೆ ಮಾಡುವವರೆಗೂ ನೀವು ಏನು ಸುತ್ತೋಲೆ ಮಾಡಿದ್ದೀರಿ ಅದನ್ನು ಸದ್ಯಕ್ಕೆ ಸ್ಟೇ ಮಾಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಸನ್ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡಿ.

ಶ್ರೀ ಜಿ.ವಿ. ರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಕುಡಿಯುವ ನೀರಿನಲ್ಲಿ ಕೊರಾಸಿಸ್ ಇದೆ ಎಂದು ಹೇಳಿ ಗಮನ ಸೆಳೆಯುವ ಸೂಚನೆ ತಂದಿದ್ದು, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದರು. ಆದರೆ ಇದುವರೆಗೂ ಇದಕ್ಕೆ ಸಂಬಂಧಪಟ್ಟ ಹಾಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಉತ್ತರ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ: ಮಾನ್ಯ ಅಧ್ಯಕ್ಷರೇ, ಗದಗ್ ನಗರಕ್ಕೆ ಕುಡಿಯುವ ನೀರು ಲಭ್ಯ ಇದೆ. ಆದರೆ ನೀರು ಸರಬರಾಜು ಬೇಕಾದಂತಹ ವಿದ್ಯುತ್ ಸರಬರಾಜಿನಲ್ಲಿ ತೊಂದರೆಯಾಗಿದೆ. ಒಂದು ದಿವಸ 8 ತಾಸುಗಳ ಕಾಲ, 10 ತಾಸುಗಳ ಕಾಲ, 12 ತಾಸುಗಳ ಕಾಲ ಪಂಪ್ ಮಾಡುತ್ತಾರೆ. ಮನಸ್ಸಿಗೆ ಬಂದರೆ ಒಮ್ಮೊಮ್ಮೆ 24 ತಾಸೂ ಪಂಪ್ ಮಾಡುತ್ತಾರೆ. ಕನಿಷ್ಠ 3 ದಿವಸಕ್ಕೆ ಒಮ್ಮೆಯಾದರೂ ಕೆ.ಇ.ಬಿ.ಯವರು ಕುಡಿಯುವ ನೀರಿಗೆ ಬೇಕಾದಂಥ ವೋಲ್ಟೇಜ್ ಕೊಟ್ಟು ವಿದ್ಯುತ್ ಸರಬರಾಜು ಮಾಡಬೇಕಾಗುತ್ತದೆ. ತಾವು ಇದನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಶ್ರೀ ಬಿ.ಆರ್. ಪಾಟೀಲರು ಮಾತನಾಡಿ.

ಶ್ರೀಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸನ್ಮಾನ್ಯ ಸಚಿವರು ಹೇಳಿದಂಥ ಹೇಳಿಕೆ ಬಹುಶಃ ಅವರಿಗೆ ಗೊತ್ತಿರಲಿಕ್ಕಿಲ್ಲ. ಇದರ ಬಗ್ಗೆ 4

ತಿಂಗಳಲ್ಲಿ ನೀರು ಕೊಡುತ್ತೇವೆ ಎನ್ನುವಂತಹ ವಿಷಯ ಪ್ರಸ್ತಾಪ ಮಾಡಿದ್ದಾರೆ. ಆದರೆ ನಿಜವಾಗಿ ಹೇಳಬೇಕಾದರೆ ಕುಡಿಯುವ ನೀರಿನ ವ್ಯವಸ್ಥೆ ಏನು ಆಗುತ್ತಿದೆಂದರೆ, ನಾವು ಸತತವಾಗಿ ಎದುರಿಸುತ್ತಿರುವ ನೀರಿನ ಬವಣೆಯಿಂದ ಪರಿಸ್ಥಿತಿ ಗಂಭೀರವಾಗುತ್ತಾ ಇದೆ. ಮಳೆಗಾಲದ ಒಂದು ಅನಾನುಕೂಲತೆಯಿಂದ ಮುದ್ನಾಳ ಕೆರೆಯಲ್ಲಿ ನೀರು ಇಲ್ಲ ಎಂದು ಸರ್ಕಾರದವರು ಹೇಳುತ್ತಾರೆ. ಆದರೆ ಸನ್ಮಾನ್ಯ ಸಚಿವರು ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ನಾನು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಪ್ರಶ್ನೆ ಮಾಡಿದಾಗ ಅವರು, ಆಗಸ್ಟ ತಿಂಗಳವರೆಗೆ ನೀರಿನ ಪೂರೈಕೆ ಮಾಡಲಿಕ್ಕೆ ಸಾಧ್ಯ ಇದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅಧಿಕಾರಿಗಳು ಹೇಳುವ ಒಂದು ಪ್ರಮುಖ ವಿಷಯ ಏನೆಂದರೆ ವಿದ್ಯುತ್ತಿನ ಅಭಾವದಿಂದ ನೀರನ್ನು ಒದಗಿಸಲಿಕ್ಕೆ ಆಗುತಿಲ್ಲವೆಂದು ಅವರು ಲಿಖಿತ ರೂಪದಲ್ಲಿ ನನಗೆ ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ಸನ್ಮಾನ್ಯ ಸಚಿವರು ಇದರ ಬಗ್ಗೆ ಸವಿಸ್ತಾರವಾದಂತಹ ಮಾಹಿತಿ ತೆಗೆದುಕೊಳ್ಳಬೇಕು.

ಇಲ್ಲದೇ ಹೋದರೆ ಮೊದಲಿನಿಂದಲೂ ಇದೇ ಪರಿಸ್ಥಿತಿ ಇದೆ, ನಗರಸಭೆಗಳ ಬಗ್ಗೆ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಬಹಳಷ್ಟು ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಕುಡಿಯುವ ನೀರಿನ ಶೇಖರಣೆ ಸಾಕಷ್ಟು ಇದ್ದರೂ ಕೂಡಾ, ಕೇವಲ ವಿದ್ಯುತ್ತಿನ ಕೊರತೆ ಇದೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ಇದುವರೆಗೆ ನಮ್ಮ ಜಿಲ್ಲೆಯ ಇಂಡಿ ಮತ್ತು ಬೇರೆ ಊರಿನಲ್ಲಿ ಕುಡಿಯುವ ನೀರಿನ ಗಂಭೀರ ಪರಿಸ್ಥಿತಿ ಇತ್ತು. ಅಲ್ಲಿ 15-20 ದಿನಗಳಿಗೆ ಒಮ್ಮೆ ನೀರು ಬರುವ ಪರಿಸ್ಥಿತಿ ಇದ್ದರೂ ಕೂಡ ಸರ್ಕಾರ ನಮಗೆ ಒದಗಿಸಿರುವ ಮಾಹಿತಿಯಲ್ಲಿ ಈ ಪರಿಸ್ಥಿತಿಯ ಬಗ್ಗೆ ಯಾವುದೇ ಸ್ಪಷ್ಟವಾದಂತಹ ಉತ್ತರ ಇಲ್ಲ. ಇದೇ ರೀತಿ ನಮ್ಮ ಜಿಲ್ಲೆಯಲ್ಲಿ ಕೊಳವೆ ಬಾವಿಗಳು ಬಹಳಷ್ಟು ವಿಫಲವಾಗುತ್ತಿವೆ. ಏಕೆಂದರೆ ಸುಮಾರು 300-350 ಅಡಿಗಳ ಆಳದವರೆಗೆ ಕೊಳವೆ ಬಾವಿಗಳು ಹೋದಾಗ ಮಾತ್ರ ನೀರು ಸಿಗುತ್ತದೆ. ಆದರೆ ಅವುಗಳಿಗೆ ಹ್ಯಾಂಡ್ ಪಂಪ್ ಹಾಕುತ್ತಾರೆ. ಹಾಕಿದ ಮಾರನೆಯ ದಿವಸ ಅವು ಸರಿಯಾಗಿ ಕೆಲಸ ಮಾಡುವುದಿಲ್ಲ. ಕುಡಿಯುವ ನೀರು ಕೊಡುವ ಬಗ್ಗೆ ಯಾವ ರೀತಿ ಕ್ರಮತೆಗೆದುಕೊಂಡಿದ್ದೀರಿ? ಬಿಜಾಪುರದ ಕುಡಿಯುವ ನೀರಿನ 2ನೇ ಹಂತದ ಯೋಜನೆಗೆ ಹೆಚ್ಚಿನ ಆಶ್ಯತೆ ಕೊಟ್ಟು ನೀವು ಕೆಲಸ ಮಾಡಿದರೆ ಏನಾದರೂ ಒಂದು ಪರಿಹಾರವನ್ನು ಮಾಡಬಹುದು ಎಂದು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಯೋಜನೆಗೆ ಹಣ ಕೊಡುತ್ತೀರಿ. ಉದಾಹರಣೆಗೆ ಹೇಳುವುದಾದರೆ, ಕುಡಿಯುವ ನೀರಿಗಾಗಿ ಕೊಳವೆ ಬಾವಿಗಳನ್ನು ಕೊರೆಸಿದರೆ, ಕೊರೆದ ಮಾರನೇಯ ದಿವಸ ಪಕ್ಕದ ಹಿಡುವಾಳಿ ಭೂಮಿಯಲ್ಲಿ ಇರತಕ್ಕಂಥವರು ಇನ್ನೂ ಆಳವಾಗಿ ಕೊರೆಸುತ್ತಾರೆ. ಇದರಿಂದ ನೀರು ಒಂದೇ ದಿವಸದಲ್ಲಿ ಮುಗಿದು ಹೋಗುತ್ತದೆ. ಮಾರನೇಯ ದಿವಸವೇ ಕೊಳವೆ ಬಾವಿ ಫೇಲೂಕರ್ ಆಗುತ್ತದೆ. ಇದಕ್ಕೆ ವಿಶೇಷವಾದ ಕ್ರಮ ಏನು ಕೈಗೊಳ್ಳುತ್ತಿರಿ? ಎರಡನೆಯದಾಗಿ ಈಗ ಎಷ್ಟೋ ಹಳ್ಳಿಗಳಲ್ಲಿ ಇವತ್ತು ಕುಡಿಯುವ ನೀರಿನ ಸೌಲಭ್ಯ ಇದೆ. ಇದ್ದರೂ ಕೂಡಾ ಆ ನೀರನ್ನು ಕುಡಿಯುವುದಕ್ಕೆ ಆಗುವುದಿಲ್ಲ. It is hard water ಹೊಸ ಬಡಾವಣೆಗಳು ಗ್ರಾಮಗಳಲ್ಲಿ ಆಗಿವೆ. ಅದಕ್ಕೆ ವಿಶೇಷ ಸೌಲಭ್ಯವನ್ನು ಮಾಡಿ ಕುಡಿಯುವ ನೀರನ್ನು ಒದಗಿಸುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು.

ಶ್ರೀಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಾವು ಸದುದ್ದೇಶದಿಂದ, ಬಜೆಟ್ ಬಗ್ಗೆ ಚರ್ಚೆ ಮಾಡಬೇಕಾಗಿದೆ ಎಂದು ತಿಳಿಸಿದ್ದೀರಿ. ಆದರೆ ಇಷ್ಟು ಪ್ರಮುಖವಾಗಿರತಕ್ಕ ವಿಷಯದ ಬಗ್ಗೆ ಚರ್ಚೆ ಮಾಡುವುದು ಸರಿ ಇದೆ. ಬೆಂಗಳೂರು ನಗರದ ನೀರಿನ ಸಮಸ್ಯೆ ಬಗ್ಗೆ ಅರ್ಧ ದಿವಸ ಚರ್ಚೆ ಆಯಿತು. ಈಗ ಇಡೀ ರಾಜ್ಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಶ್ರೀ ಬೆಲ್ಲದರವರಿಗೆ ಸಾಧ್ಯವಾದರೆ 2-3 ನಿಮಿಷಗಳ ಕಾಲ ಮಾತ ನಾಡಲು ಅವಕಾಶ ಕೊಡಿ.

ಶ್ರೀ. ಡಾ. ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ಬಹಳ ಜನ ಸಹಿ ಹಾಕಿದ್ದಾರೆ. ಈಗಾಗಲೇ ಏನು ಒಂದು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದಾರೆ ಅದನ್ನು ಮತ್ತೊಮ್ಮೆ ಈ ಸಮಯ ದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಮತ್ತೊಮ್ಮೆ ತಾವು ಅದನ್ನು ತೆಗೆದುಕೊಳ್ಳ ಬೇಕಾಗಿದೆ. ಕುಮಟಾ, ಹೊನ್ನಾವರ ಹಾಗೂ 10 ಹಳ್ಳಿಗಳಲ್ಲಿ ಕುಡಿಯುವ ನೀರಿನ ಯೋಜನೆ1968ರಲ್ಲಿ ಪ್ರಾರಂಭವಾಗಿದ್ದು ಅದು ಇಂದಿಗೂ ಕುಂಟುತ್ತಾ ಸಾಗಿದೆ. ಕುಮಟಾ ಪುರಸಭೆ ತನ್ನ ಪಾಲಿನ ಷೇರನ್ನು ಸರ್ಕಾರಕ್ಕೆ ತುಂಬಿದೆ. ಆ ಯೋಜನೆ ಸ್ಥಗಿತಗೊಂಡಿದ್ದು ನೀರು ಸರಬರಾಜು ಆಗುತ್ತಿಲ್ಲ. ಆದರೂ ಕೂಡ ಪುರಸಭೆ ಜಕಾತಿ ಹಣವನ್ನು ಸರ್ಕಾರ ವಸೂಲು ಮಾಡಬಾರದು ಎನ್ನತಕ್ಕಂಥ ಒಂದು ಸೂಚನೆಯನ್ನು ನಾನು ಕೊಡುತ್ತಿದ್ದೇನೆ.

ಅಧ್ಯಕ್ಷರು : ಸನ್ಮಾನ್ಯ ಶ್ರೀ ಚಂದ್ರಕಾಂತ ಬೆಲ್ಲದ ಅವರು ಮಾತನಾಡಿ.

ಶ್ರೀಚಂದ್ರಕಾಂತ ಜಿ ಬೆಲ್ಲದ : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ಬಿಟ್ಟರೆ ಕರ್ನಾಟಕ ರಾಜ್ಯದಲ್ಲಿ ಹುಬ್ಬಳ್ಳಿ ಧಾರವಾಡದ ಒಂದು ಮಹಾನಗರ ಎನ್ನುವುದು ಕರ್ನಾಟಕ ಸರ್ಕಾರಕ್ಕೆ ಅರಿವಿರತಕ್ಕಂಥ ಒಂದು ವಿಚಾರ. ಆದರೆ ಹುಬ್ಬಳ್ಳಿ ಧಾರವಾಡದಲ್ಲಿ ಕುಡಿಯುವ ನೀರಿಗೆ ಜನ ಎಷ್ಟೊಂದು ಪರಿಪಾಟಲು ಪಡುತ್ತಿದ್ದಾರೆ ಅನ್ನತಕ್ಕಂಥಾದ್ದು ಈಗಾಗಲೇ ಸಾಕಷ್ಟು ಸನ್ಮಾನ್ಯ ಮಂತ್ರಿಗಳಿಗೆ ಗೊತ್ತಿರಬೇಕೆಂದು ಹೇಳುತ್ತಿದ್ದೇನೆ. ಮಲಪ್ರಭಾದ ನೀರು ಧಾರವಾಡಕ್ಕೆ 40 ಕಿ.ಮೀ. ದೂರದಿಂದ ಬರುತ್ತದೆ. ಹೀಗೆ ಬರತಕ್ಕಂಥ ನೀರು 166 ಕಡೆ ದೊಡ್ಡದೊಡ್ಡ ನೀರಿನ ಸೋರಿಕೆ ಉಂಟಾಗಿ ಅಲ್ಲೆಲ್ಲ ಕೆರೆ ಕಂಡ ಹಾಗೆ ಕಾಣುತ್ತಿದೆ. ನಾವು ಜಲ ಮಂಡಳಿಯವರನ್ನು ಮಹಾನಗರ ಸಭೆಯವರನ್ನು ಮತ್ತು ಕೆ.ಇ.ಬಿಯವರನ್ನು ಕರೆದುಕೊಂಡು ಇದೇ ತಿಂಗಳ 14ನೇ ದಿನಾಂಕದಂದು ಪ್ರವಾಸ ಮಾಡಿ ಬಂದೆವು. ಈ ಕುಡಿಯುವ ನೀರು 166 ಕಡೆಗಳಲ್ಲಿ ಎಲ್ಲೆಲ್ಲಿ ಸೋರಿಹೋಗುತ್ತಿದೆ. ಅಲ್ಲೆಲ್ಲಾ ರೈತರು ನೀರಾವರಿ ಮಾಡಿಕೊಳ್ಳುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯಬೆಲ್ಲದ್ ಅವರೇ ಇದು ಗಮನ ಸೆಳೆಯುವ ಸೂಚನೆ ಕುಡಿಯುವ ನೀರಿನ ಅಭಾವದ ಬಗ್ಗೆ, ರಾಜ್ಯದಲ್ಲಿ ಇರತಕ್ಕ ಸ್ಥಿತಿಯ ಬಗ್ಗೆ ಗಮನ ಸೆಳೆಯಿರಿ. ಮಂತ್ರಿಗಳು ಒಂದು ಹೇಳಿಕೆ ಮಾಡಿದ್ದಾರೆ. ಆ ಹೇಳಿಕೆಯಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಕವರ್ ಮಾಡದೇ ಇರತಕ್ಕಂಥ ಅಂಶಗಳಿದ್ದರೆ ಅದನ್ನು ಅವರ ಗಮನಕ್ಕೆ ತನ್ನಿ. ಬೆಲ್ಲದ ಅವರೇ ನೀವು ಹಿರಿಯರು ಇದ್ದೀರಿ. ನೀವು ಏಕೆ ಹೀಗೆ ಭಾಷಣ ಮಾಡುತ್ತೀರಿ?

ಶ್ರೀ ಚಂದ್ರಕಾಂತ ಜಿ. ಬೆಲ್ಲದ : ನೀರು ಅಲ್ಲಿ ಸೋರಿ ಹೋಗುತ್ತಿರುವುದು ಏಕೆಂದರೆ ಅಲ್ಲಿ ಮೀಟರ್ ಕಳುವಾಗಿದೆ.

ಅಧ್ಯಕ್ಷರು : ಕುಡಿಯುವ ನೀರಿನ ಬಗೆ ಮಾತನಾಡಿ ಎಂದರೆ ಮೀಟರ್ ಕಳವಾಗಿರುವ ಬಗ್ಗೆ ಮಾತನಾಡುತ್ತಿದ್ದೀರಿ

ಶ್ರೀ ಚಂದ್ರಕಾಂತ್ ಬೆಲ್ಲದ್ : ಅಲ್ಲಿ ಮೀಟರ್ ಇಲ್ಲದಿರುವುದರಿಂದ ನೀರನ್ನು ಸರಿಯಾಗಿ ಕೊಡುತ್ತಿಲ್ಲ. ಜನರ ಸಮಸ್ಯೆಗಳು ಏನು ಎಂಬುದನ್ನು ಸರ್ಕಾರ ಪರಿಶೀಲಿಸಿ ಅದರ ಪರಿಹಾರದ ಕಡೆಗೆ ತೀವ್ರ ಗಮನಹರಿಸಬೇಕು. 1978-79ರಲ್ಲಿ ಪ್ರಪಂಚ ಬ್ಯಾಂಕ್‌ನಿಂದ ಹಣವನ್ನು ತೆಗದುಕೊಂಡು ಬಂದು ನಮ್ಮ ಹುಬ್ಬಳ್ಳಿ-ಧಾರವಾಡ ನಗರಕ್ಕೆ ನೀರನ್ನು ಕೊಡಬೇಕೆಂಬ ಉದ್ದೇಶ ಇಟ್ಟುಕೊಂಡು ಪೈಪುಗಳನ್ನು ತೆಗೆದುಕೊಳ್ಳಬೇಕು, ಟ್ಯಾಂಕ್‌ಗಳನ್ನು ಕಟ್ಟಬೇಕೆಂದು ಹೇಳಿದ್ದರು. ಇವತ್ತು ಆ ಕೆಲಸ ನಮ್ಮಲ್ಲಿ ಏನೇನೂ ಆಗಿಲ್ಲ. ಅದು ಯಾವ ಹಂತದಲ್ಲಿದೆ? ಈ ಕೆಲಸವನ್ನು ತೀವ್ರವಾಗಿ ಮಾಡುವ ದೊಡ್ಡ ಉದ್ದೇಶವೇನಾದರೂ ಸರ್ಕಾರಕ್ಕೆ ಇದೆಯೇ? ನಮ್ಮ ಕರ್ನಾಟಕ ರಾಜ್ಯಗಳಲ್ಲಿ ಬೆಂಗಳೂರನ್ನು ಬಿಟ್ಟರೆ ಎರಡನೇ ದೊಡ್ಡ ನಗರ ಎಂದರೆ ನಮ್ಮ ಹುಬ್ಬಳ್ಳಿ ಧಾರವಾಡ. ಅಲ್ಲಿ ನೀರಿನ ಸಮಸ್ಯೆ ಬೃಹದಾಕಾರವಾಗಿರುವುದರಿಂದ ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಂಡು ಆದಷ್ಟು ಜಾಗ್ರತೆ ಬಗೆಹರಿಸಬೇಕೆಂದು ಒತ್ತಾಯಮಾಡುತ್ತೇನೆ.

ಶ್ರೀಎಂ.ಪಿ. ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳ ಬಹಳ ಅಂಶಗಳನ್ನು ಪ್ರಸ್ತಾಪ ಮಾಡಿದ್ದಾರೆ. ದುರಸ್ತಿ ಕಾರ್ಯಗಳಿಗೆ ಸರ್ಕಾರ ಹಣವನ್ನು ಮಿಸಲಿಟ್ಟಿಲ್ಲವೆಂದು ಹೇಳಿರುವುದು ಸಮಂಜಸವಲ್ಲ. ಈ ಕಾರ್ಯಕ್ಕೆ ನಾವು ಕೊಟ್ಟಿರತಕ್ಕ ಹಣದಲ್ಲಿ 2 ಕೋಟಿ ರೂ.ಗಳನ್ನು ಕೇವಲ ಕೆಟ್ಟಿರತಕ್ಕ ಬೋರ್‌ವೆಲ್ ರಿಪೇರಿಗೋಸ್ಕರ ಖರ್ಚುಮಾಡಬೇಕೆಂದು ತಿಳಿಸಿದ್ದೇವೆ. ಅದು ಗ್ರಾಮಾಂತರ ಪ್ರದೇಶಗಲ್ಲಿ ಇರಬಹುದು, ನಗರ ಪ್ರದೇಶಗಳಲ್ಲಿ ಇರಬಹುದು. ಸಾರ್ವಜನಿಕರಿಗೆ ಕುಡಿಯುವ ನೀರಿಗೆ ತೊಂದರೆ ಇದೆ ಎನ್ನುವ ದೂರು ಎಲ್ಲೂ ಕೂಡ ಕೇಳಿಬರಬಾರದೆಂದು ನಾವು ತೀರ್ಮಾನ ತೆಗೆದುಕೊಂಡು ಮೊಗಲ ಆದ್ಯತೆಯನ್ನು ಈ ಬಾಬ್ತಿಗೆ ಕೊಟ್ಟಿದ್ದೇವೆ. ಆಳಂದ್ ಮತ್ತು ಬೀದರ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎಷ್ಟು ತೀವ್ರವಾಗಿದೆ ಎಂಬುದು ತಮಗೂ ಗೊತ್ತಿರಬಹುದು. ಅದರಲ್ಲೂ ಆಳಂದ ತಾಲ್ಲೂಕಿನಲ್ಲಿ ಅತ್ಯಂತ ತೀವ್ರ ಸಮಸ್ಯೆ ಇದೆ. ಬೀಗರ್ ಪಟ್ಟಣಗಳಲ್ಲಿ ಜನರಿಗೆ ಕುಡಿಯುವ ನೀರನ್ನೊದಗಿಸಲು ಬೇರೆಬೇರೆ ಕಡೆಗಳಿಂದ ಟ್ಯಾಂಕರ್‌ಗಳ ಮೂಲಕ ನೀರನ್ನೊದಗಿಸುವದಕ್ಕೆ ಲಾರಿಗಳನ್ನು ಕಳುಹಿಸಿ ಕೊಟ್ಟಿದ್ದೇವೆ. ಕಳೆದ 2 ವರ್ಷಗಳಿಂದ ಪ್ರಕೃತಿ ವಿಕೋಪಕ್ಕೆ ಪರಿಹಾರದ ಬಾಬ್ತು ಬರಬೇಕಾದ ಹಣ 70 ಲಕ್ಷರೂ. ಇನ್ನೂ ನಮಗೆ ಬಂದಿಲ್ಲವೆಂದು ಪದೇ ಪದೇ ಜಿಲ್ಲಾಧಿಕಾರಿಗಳು ಹೇಳುತ್ತಿದ್ದಾರೆ. ಆದರೆ22ನೇ ತಾರೀಖು ನಾವು 25 ಲಕ್ಷರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಈ ಹಣವನ್ನು ಸದುಪಯೋಗವಾಗುವ ರೀತಿಯಲ್ಲಿ ನೋಡಿಕೊಳ್ಳಲು ಆಯಾಯ ಜಿಲ್ಲಾಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಿದ್ದೇವೆ. ಬೆಂಗಳೂರನ್ನು ಹೊರತು ಪಡಿಸಿ ಉಳಿದ ಪ್ರದೇಶಗಳಿಗೆ 8 ಕೋಟಿ ರೂ. ಕೊಡಬೇಕೆಂದು

ತೀರ್ಮಾನ ಮಾಡಿದ್ದೇವೆ. ಪ್ರಕೃತಿ ವಿಕೋಪದವರೆಗೆ ಸಿಕ್ಕಿರುವ ಜಿಲ್ಲೆಗಳಾಗ ಬೀದರ್‌ಗೆ 10 ಲಕ್ಷರೂ ಮೈಸೂರಿಗೆ 10 ಲಕ್ಷ ರೂ. ಬಳ್ಳಾರಿಗೆ 10 ಲಕ್ಷರೂ. ಬೆಂಗಳೂರು ಗ್ರಾಮಾಂತರ ಪ್ರದೇಶಕ್ಕೆ 5 ಲಕ್ಷರೂ ಚಿಕ್ಕಮಗಳೂರು ಜಿಲ್ಲೆಗೆ 5 ಲಕ್ಷರೂ, ಹಾಸನ ಜಿಲ್ಲೆಗೆ 5 ಲಕ್ಷ ರೂ ಕೋಲಾರಕ್ಕೆ 10 ಲಕ್ಷ ರೂ. ಧಾರವಾಡಕ್ಕೆ 5 ಲಕ್ಷರೂ, ಗುಲ್ಬಾರ್ಗಾ ಜಿಲ್ಲೆಗೆ 10 ಲಕ್ಷರೂ, ಹೀಗೆ ಒಟ್ಟು 80 ಲಕ್ಷರೂ.ಗಳನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ತಾ. 10.3.95ರಲ್ಲಿ ಕೊಟ್ಟಿದ್ದೇವೆ. ಇದರ ನಂತರ ಮತ್ತೆ 5 ಕೋಟಿ ರೂ.ಗಳನ್ನು ಕೈ ಪಂಪು ಮತ್ತು ಕಿರು ನೀರು ಸರಬರಾಜು ಯೋಜನೆಗೋಸ್ಕರ ಖರ್ಚುಮಾಡಿದ್ದೇವೆ. ನಮ್ಮ ಸರ್ಕಾರ ಇಷ್ಟೊಂದು ಹಣವನ್ನು ಕೇವಲ ಕುಡಿಯುವ ನೀರಿನ ಸಮಸ್ಯೆಯನ್ನು ಹೋಗಲಾಡಿಸುವ ಸಲುವಾಗಿಯೇ ಖರ್ಚುವಾಡುತ್ತಿದ್ದೇವೆ, ಯಾವುದೇ ಕಾರಣಕ್ಕೂ ಗ್ರಾಮಾಂತರ ಪ್ರದೇಶಗಳಲ್ಲಿ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ ಕೆಟ್ಟಿದೆ ಎಂಬ ದೂರು ಸರ್ಕಾರದ ಕಿವಿಗ ಬೀಳಬಾರದೆನ್ನುವ ಉದ್ದೇಶ ಇಟ್ಟುಕೊಂಡು ಕೊಟ್ಟಿದ್ದೇವೆ. ನಾವು ಎಷ್ಟು ಖರ್ಚುಮಾಡಿದರೂ ಈ ಸಮಸ್ಯೆ ಇದ್ದೇ ಇರತಕ್ಕ ಸಮಸ್ಯೆಯಾಗಿದೆ. ಇದು ಹೊಸದೇನೂ ಅಲ್ಲ.

ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತಮ್ಮ ಮೂಲಕ ತರಬಯಸುತ್ತೇನೆ. ಕಳೆದ ಸಾರಿ ಕೆಲವು ಜಿಲ್ಲೆಗಳಲ್ಲಿ ಮಳೆ ಸರಿಯಾಗಿ ಬಾರದೆ ಅಂತರ್ಜಲ ಕಡಿಮೆಯಾಗಿ ಕೈ ಪಂಪಗೂ ನೀರು ಸಿಕ್ಕುತ್ತಿಲ್ಲ. ಸರ್ಕಾರ ತನ್ನ ಭಾಗದ ಕರ್ತವ್ಯ ಯವನ್ನು ಪ್ರಕೃತಿಯ ಎದುರು ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ.

ಈ ಸಂದರ್ಭದಲ್ಲಿ ಶರಣರ ಒಂದು ವಚನ ನನ್ನ ನೆನಪಿಗೆ ಬರುತ್ತದೆ. ಏರಿಯನ್ನು ಕಟ್ಟಬಾರದಲ್ಲದೆ ಆದರಲ್ಲಿ ನೀರನ್ನು ನಿಲ್ಲಿಸಬಸುದೇ, ಎಂದು ನಾವು ಏರಿಯನ್ನು ಕಟ್ಟ ಬಹುದು ಆದರೆ ಆ ಕೆರೆಯಲ್ಲಿ ನಿಲ್ಲಿಸುವ ಕಾರ್ಯ ನಮ್ಮಿಂದ ಆಗುವುದಿಲ್ಲ. ಆದೇ ರೀತಿ ಕೈಗೆ ಕೊಡಬಾರದಲ್ಲದೇ ಪರಾಕ್ರಮ ಕೊಡಲು ಸಾಧ್ಯವೆ? ಎಂದು.

ಮಾನ್ಯ ಅಧ್ಯಕ್ಷರೇ, ಈ ಸಮಸ್ಯೆ ಪರಿಹಾರದ ಬಗ್ಗೆ ಎಲ್ಲ ಶಾಸಕರ ಸಭೆಯನ್ನು ಕರೆಯಬೇಕೆಂದು ಮಾನ್ಯ ಸದಸ್ಯರಾದ ಈಶ್ವರಪ್ಪನವರು ಹೇಳಿದರು. ಖಂಡಿತವಾಗಿಯೂ ಆ ಸಂದರ್ಭ ಬಂದಾಗ ಎಲ್ಲಾ ಮಾನ್ಯ ಸದಸ್ಯರನ್ನೂ ಬರಮಾಡಿಕೊಂಡು ಅವರ ಅಮೂಲ್ಯ ಸಲಹೆ ಸೂಚನೆಗಳನ್ನು ತೆಗೆದುಕೊಳ್ಳುತ್ತೇನೆ.

ಇನ್ನು ವೊಲ್ಟೇಜ್ ಕಡಿಮೆಯಾದಾಗ ಪಂಪ್‌ಸೆಟ್ಟುಗಳು ಸುಟ್ಟು ಹೋಗುತ್ತವೆ, ರೈತರು ಕಷ್ಟಕ್ಕೆ ಗುರಿಯಾಗಬೇಕಾಗುತ್ತದೆ. ಅವರ ಪರಿಸ್ಥಿತಿ ಉಲ್ಬಣವಾಗುತ್ತದೆ ಎಂಬ ವಿಚಾರವನ್ನು ಎಲ್ಲಾ ಸದಸ್ಯರೂ ಪಕ್ಷ ಭೇದವಿಲ್ಲದೇ ಪ್ರಸ್ತಾಪ ಮಾಡಿದ್ದಾರೆ. ಇದು ಒಪ್ಪತಕ್ಕ ವಿಚಾರ.....

ಶ್ರೀಮತಿ ಮ್ಮಮೀಳಾ ಎನ್. ನೇಸರ್ಗಿ ಮಾನ್ಯ ಅಧ್ಯಕ್ಷರೇ, ಹಿಂದಿನಕಾಲದಲ್ಲಿ '' ಕೆಯೆಯಂ ಕಟ್ಟಿಸು, ಬಾವಿಯಂ ತೆಗೆಸು ಎಂದು ಹೇಳುತ್ತಿದ್ದು, ಆಗಲೇ ಈ ಕಾಲದಲ್ಲಿ ಕೆರೆಯಂ ಮುಚ್ಚಿಸಿ

ಬಾವಿಯಂ ಮುಚ್ಚಿಸಿ ಎನ್ನುವಂತಾಗಿದೆ. ಆದ್ದರಿಂದ ಈಗಲಾದರೂ ಕೆರೆಗಳನ್ನು ಮುಚ್ಚಿಸುವುದನ್ನು ನಿಲ್ಲಸುವಿರಾ? ಎಂದು ಕೇಳಬಯಸುತ್ತೇನೆ.

ಅಧ್ಯಕ್ಷರು : ಎಲ್ಲವನ್ನು ಪರಿಶೀಲಿಸುತ್ತೇವೆಂದು ಹೇಳಿಬಿಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇನ್ನೊಂದು ಸಮಸ್ಯೆ ಎಂದರೆ, ಬಹಳಷ್ಟು ಜನ ಕೊರೆಸಿರುವ ಕೊಳವೆಬಾವಿಗಳಿಗೆ ಇನ್ನೂ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ. ಕೇಳಿದರೆ ಕಂಡಕ್ಟರ್ ಇಲ್ಲ, ವೋಲ್ಟೇಜ್ ಇಲ್ಲ, ಅದಿಲ್ಲ, ಇದಿಲ್ಲ ಎಂದು ಹೇಳುತ್ತಾರೆ. ಇದಕ್ಕಾದರೂ ಜಿಲ್ಲಾಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಒಂದು ಟಾಸ್ಕ್‌ಫೋರ್ಸ್ ಮಾಡಿದರೆ ಅನುಕೂಲವಾಗುತ್ತದೆ ಎನಿಸುತ್ತದೆ. ಯಾವುದೇ ಸರ್ಕಾರ ಅಧಿಕಾರಕ್ಕೆ ಬರಲಿ ಎಲ್ಲಾ ಸಮಸ್ಯೆಗಳನ್ನೂ ನಾವು ಬಗೆಹರಿಸುತ್ತೇವೆಂದು ಹೇಳುವುದಕ್ಕಾಗಿವುದಿಲ್ಲ. ನಮ್ಮ ಸರ್ಕಾರ ಇದ್ದಾಗಲೂ ನಾವು ಎಲ್ಲಾ ಸಮಸ್ಯೆಗಳನ್ನೂ ಸಂಪೂರ್ಣವಾಗಿ ಬಗೆ ಹರಿಸಿದ್ದೆವು ಎಂದು ಹೇಳಿಕೊಳ್ಳುವುದಕ್ಕೆ ನಾನು ತಯಾರಿಲ್ಲ. ಆದರೆ ಜನಸಾಮಾನ್ಯರ ಸಾಮಾನ್ಯ ಸಮಸ್ಯೆಗಳನ್ನಾದರೂ ಸ್ವಲ್ಪಮಟ್ಟಿಗಾದರೂ ಬಗೆಹರಿಸುವುದಕ್ಕೆ ಖಾಯಂ ವ್ಯವಸ್ಥೆ ಮಾಡಬೇಕು. ಈ ದಿಸೆಯಲ್ಲಿ ನೀವು ಏನು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೀರಿ ಎಂಬುದನ್ನಾದರೂ ಸಭೆಗೆ ತಿಳಿಸುತ್ತೀರಾ ?

ಶ್ರೀಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈ ಸಾಲಿನ ಸಾಮಾನ್ಯ ಅನುದಾನಕ್ಕಿಂತ 45ರಷ್ಟು ಹೆಚ್ಚಿನ ಹಣವನ್ನು ಒದಗಿಸಿದ್ದೇವೆ. ಅಂದರೆ ಇದರಲ್ಲಿ ಕೇಂದ್ರದ ಅನುದಾನ 70.55 ಕೋಟಿ ರೂ. ಸೇರಿದೆ. ಇದ್ದೇ ರೀತಿ 104.35 ಕೋಟಿ ರೂ.ಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಬಿಡುಗಡೆ ಮಾಡಿದ್ದೇವೆ. 8100 ಕಿರು ನೀರು ಸರಬರಾಜು ಯೋಜನೆ, 9 ಸಾವಿರ ಕೊಳಾಯಿ ನೀರಿನ ಯೋಜನೆಗಳಿಗಾಗಿ 450 ಕೋಟಿ ರೂ.ತೊಡಗಿಸಿದ್ದೇವೆ. 22ನೇ ತಾರೀಖು ಜಿಲ್ಲಾಧಿಕಾರಿಗಳ ಸಭೆಯನ್ನು ಕರೆದು ಸಂದರ್ಭಕ್ಕನುಸಾರವಾಗಿ ಸ್ಥಳೀಯವಾಗಿ ಜಿಲ್ಲಾಧಿಕಾರಿಗಳೇ ತೀರ್ಮಾನವನ್ನು ತೆಗೆದುಕೊಳ್ಳುವಂತೆ ಅಧಿಕಾರವನ್ನು ನೀಡಿದ್ದೇನೆ. ಅವಶ್ಯಕತೆಯನ್ನು ನೋಡಿಕೊಂಡು ವಿದ್ಯುಚ್ಛಕ್ತಿ ಪೂರೈಕೆ ಇಲ್ಲದ ಕಡೆಗಳಲ್ಲಿ ಜನರೇಟರುಗಳನ್ನು ಕೊಂಡುಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ. Installation of voltage boosters, Capacitors and Diesel Generators wherever there is voltage fluctuation and low voltage. ಎನ್ನತಕ್ಕ ನಿರ್ಣಯವನ್ನು ಮಾಡಿದ್ದೇವೆ. ಈಗಾಗಲೇ ಮಡಿಕೇರಿಗೆ ಜನರೇಟರನ್ನು ಕಳುಹಿಸಿಕೊಟ್ಟಿದ್ದೇವೆ. ಆದರೆ ಮಳೆಗಾಲ ಪ್ರಾರಂಭವಾದಾಗ ಈ ಜನರೇಟರ್ ಮೇಲೆ ಹಾಕತಕ್ಕ ಹಣ ವೃಥಾ ವೇಸ್ಟ್ ಆಗುವುದರಿಂದ ಹೆಚ್ಚಿಗೆ ಜನರೇಟರ್‌ಗಳನ್ನು ಕೊಂಡುಕೊಳ್ಳುವುದು ಬೇಡ ಎಲ್ಲಿಗೆ ಅವಶ್ಯಕ ಎಂದು ಕಂಡುಬರುತ್ತದೋ ಅಲ್ಲಿಗೆ ಕೊಂಡುಕೊಳ್ಳಬೇಕೆಂದು ಹೇಳಿದ್ದೇನೆ. ಇದಕ್ಕೆ 8 ಕೋಟಿ ರೂ. ಕೊಟ್ಟರೆ ಅದರ ಮೂಲಕ ನಾವು ಕೆಲಸಮಾಡುತ್ತೆವೆಂದು ಜಿಲ್ಲಾಧಿಕಾರಿಗಳು ಹೇಳಿದ್ದಾರೆ. ಸರ್ಕಾರದ ಜೊತೆ ಮಾನ್ಯ ಶಾಸಕರೂ ಕೂಡಾ ಸಹಕಾರವನ್ನು ನೀಡಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಸದಸ್ಯರಾಗ ಜಯಚಂದ್ರು ಬಹಳ ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಕೊಳವೆ ಬಾವಿಗಳನ್ನು ಕೊರೆಸಲು ಪಿ. ಎಲ್. ಡಿ. ಬ್ಯಾಂಕ್‌ನಿಂದ ಸಾಲತೆಗೆದುಕೊಳ್ಳಬೇಕಾದರೆ ಕನಿಷ್ಠ 800 ಅಡಿ ಅಂತರ ಇರಲೇಬೇಕೆಂದು ಇದ್ದರೂ ಕೂಡಾ ಖಾಸಗಿಯವರು ಕೆಲವುಕಡೆ ಕೊಳವೆಬಾವಿಗಳನ್ನು ಕೊರೆಸುತ್ತಾರೆ. ಅದು ಅವರ ಸ್ವಂತ ರಿಸ್ಕ್‌ಗೆ ಸಂಬಂಧಿಸಿದ್ದು ಅವರು ಸ್ವತ ಹಣವನ್ನು ಖರ್ಚುಮಾಡಿ ಹಾಕಿಸಿಕೊಳ್ಳುತ್ತಾರೆ. ಅದಕ್ಕೆ ನಾನೇನೂ ಮಾಡುವುದಕ್ಕೆ ಬರುವುದಿಲ್ಲ. ಅವರನ್ನು ಕೇಳುವ ಅಧಿಕಾರ ನಮಗಿಲ್ಲ. ಖಾಸಗಿಯವರು ಈ ರೀತಿ ಮಾಡುವುದರಿಂದ ಪಿ.ಎಲ್.ಡಿ.ಬ್ಯಾಂಕ್‌ನಿಂದ ಸಾಲಪಡೆದವರು ಕೊರೆಸುವ ಅನೇಕ ಬಾವಿಗಳು ವಿಫಲವಾಗುತ್ತದೆ. ನಾವು ಜಲನೀತಿಯನ್ನು ಅನುಸರಿಸಬೇಕು. ಅದನ್ನು ಅನುಸರಿಸದೇ ಹೋದಾಗ ಕಷ್ಟಕ್ಕೆ, ನಷ್ಟಕ್ಕೆ ಒಳಗಾಗಬೇಕಾಗುತ್ತದೆ. ಆದರೆ ಬೇರೆಯವರು ಕೊಳವೆಬಾವಿಗಳನ್ನು ತೆಗೆಯಬಾರದೆಂದು ಹೇಳುವುದಕ್ಕೆ ನಮಗೆ ಸಾಧ್ಯವಿಲ್ಲ. ಇದನ್ನು ನಾವು ತೀವ್ರವಾಗಿ ಪರಿಶೀಲಿಸಬೇಕಾಗುತ್ತದೆ. ಇವತ್ತು ನಾವು ಎಲ್ಲಿ ಭೂಮಿಯನ್ನು ಕೊರೆದರೂ ಭೂತಾಯಿ ನಮಗೆ ನೀರನ್ನು ಕೊಡುತ್ತಿದ್ದಾಳೆ. ಆದರೆ ನಾವು ಜಲನೀತಿಯನ್ನು ಅನುಸರಿಸದೇ ನಮ್ಮ ಮನಸ್ವೇಚ್ಛೆಯಾಗಿ ಭೂಮಿಯನ್ನು ಕೊರೆಯುತ್ತಾ ಹೋದರೆ ಭೂತಾಯಿ ನಮಗೆ ನೀರನ್ನು ಕೊಡುವುದಕ್ಕೆ ಬದಲಾದ ರಕ್ತವನ್ನು ಕಾರುವ ಸಂದರ್ಭ ಬಂದರೂ ಬರಬಹುದು. ಮಾನ್ಯಸದಸ್ಯರೊಬ್ಬರು ಒಂದು ಮುಖ್ಯವಾದ ಪ್ರಶ್ನೆಯನ್ನು ಕೇಳಿದರು.

ಕ್ಲೋರೈಡಯುಕ್ತವಾದ ನೀರನ್ನು ಕುಡಿಯುವುದಕ್ಕೆ ಯೋಗ್ಯವಾದುದಲ್ಲ ಎಂದು ಅವರ ಹೇಳಿದ್ದಾರೆ. ಮಿಲಿಯನ್ ಯೂನಿಟ್‌ಗೆ 1.5ಸಿಸಿ ಇದ್ದರೆ ಅದು ಕುಡಿಯುವುದಕ್ಕೆ ನೀರು ಯೋಗ್ಯವಾಗುವುದಿಲ್ಲ ಎಂದು ಪರೀಕ್ಷೆಯಿಂದ ತಿಳಿದುಬಂದಿದೆ. ಆದರೆ ಇದು ಹಾಗೇನೂ ಇಲ್ಲ. ಕುಡಿಯುವ ನೀರಿಗೆ ಅಂತಹ ಯಾವದೇ ತೊಂದರೆ ಇಲ್ಲ. ಜಿಲ್ಲೆಗಳಲ್ಲಿ ನೀರನ್ನು ಒದಗಿಸುವುದಕ್ಕೆ ಸಾಕಷ್ಟು ಹಣವಿದೆ. ಈಗ ನಮ್ಮಲ್ಲಿ ಲಭ್ಯವಿರುವ ಅಂದಾಜಿನಪ್ರಕಾರ ಸುಮಾರು 15 ಜಿಲ್ಲೆಗಳಲ್ಲಿ ಕುಡಿಯುವುದಕ್ಕೆ ಉಪಯುಕ್ತವಾದ ನೀರು ಇದೆ. ನೀರನ್ನು ಶುದ್ಧೀಕರಣ ಮಾಡುವ ರೀತಿಯಲ್ಲಿ ಕೂಡಾ ಕ್ರಮ ತೆಗೆದುಕೊಳ್ಳಲಾಗಿದೆ. ಬಳ್ಳಾರಿಯಲ್ಲಿ ಕಾರಂಜಾ ಯೋಜನೆಯಲ್ಲಿ ಬರುವ ನೀರಿನ ಬಗ್ಗೆ ಇಂತಹ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ. ಎ ಕರ್ಗೆ : ಬಳ್ಳಾರಿ ಬಿಟ್ಟು ಬೇರೆ ಕಡೆ ಮಾಡಿದ್ದೀರಾ?

ಅಧ್ಯಕ್ಷರು : ಹುಬ್ಬಳ್ಳಿಯವರೆಗೆ ಬಂದಿದ್ದೀರಿ, ಅಲ್ಲಿಂದ ಮುಂದುವರೆಸಿ.

ಶ್ರೀ ಎಂ.ಪಿ. ಪ್ರಕಾಶ್ : ಹಿಂದಿನ ಸರ್ಕಾರ ಮಾಡದಿದ್ದುದನ್ನು ಮೂರು ತಿಂಗಳಲ್ಲಿ ಮಾಡಿಮುಗಿಸಲು ಹುಬ್ಬಳ್ಳಿ-ಧಾರವಾಡದಲ್ಲಿ ನೀರರಸಾಗರದಿಂದ ನೀರನ್ನು ಒದಗಿಸಲು 60 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ತಕ್ಷಣ ಇದರ ಬಗ್ಗೆ ತೆಗೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿಯವರಿಗೆ ತಿಳಿಸಿದ್ದೇವೆ.

ದಾ: ಎ.ಪಿ. ಕರ್ಕಿ ಕರ್ಕಿ ಹೊನ್ನಾವರ ಯೋಜನೆ 5 ವರ್ಷಗಳಿಂದ ಸ್ತಗಿತವಾಗಿದೆ. ನೀರು ಕೊಡದೆ ಬಡ್ಡಿಕೊಡುವಂಥ ಪರಿಸ್ಥಿತಿ ಅಲ್ಲಿಗೆ, ನೀರು ಕೊಡದೆ ಬಡ್ಡಿ ವಸೂಲು ಮಾಡುವುದು ಸೂಕ್ತವೇನು?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟಂತೆ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನೇರವಾದ ವಿವರಗಳನ್ನು ಈಗ ನನ್ನಲ್ಲಿ ಇಲ್ಲ. ಇದನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಈಗ ಮಾನ್ಯ ಹಣಕಾಸಿನ ಸಚಿವರು ಭಾರತ ಸಂವಿಧಾನ 205(1)ನೇ ಅನುಚ್ಛೇದದ ಮೇರೆಗೆ 1994-95ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳ ಬಗ್ಗೆ ಪ್ರಸ್ತಾಪವನ್ನು ಸಭೆಗೆ ಒಪ್ಪಿಸಲಾಗುವುದು.

ಶ್ರೀ ಸಿದ್ಧರಾಮಯ್ಯ (ಹಣಕಾಸಿನ ಮಂತ್ರಿ): ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ 205(1)ನೇ ಅನುಚ್ಛೇದದ ಮೇರೆಗೆ 1994-95ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳ ಬಗ್ಗೆ ಪ್ರಸ್ತಾಪನೆಯನ್ನು ಸಭೆಗೆ ಒಪ್ಪಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಪ್ರಸ್ತಾವನೆಯನ್ನು ಮುಗಿಸಲಾಯಿತು